ವಿಷಯಾನುಕ್ರಮಣಿಕೆ

ಅಧ್ಯಾತ್ಮಗ್ರಂಥಾವಳಿ

# ವೇದಾಂತಕಥಾವಳಿ

(ಕಥೆಗಳ ಸಹಾಯದಿಂದ ವೇದಾಂತಪ್ರಕ್ರಿಯೆಯನ್ನು ವಿಶದಗೊಳಿಸುವ ಪ್ರಕರಣ)

ಬರೆದವರು :

**ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

ಕ್ರಮಾಂಕ : ೪೨

**ಪ್ರಕಾಶಕರು :**

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ - 573211

2001

# ಪೀಠಿಕೆ

ವೇದಾಂತವು ಎಷ್ಟೋ ಕಷ್ಟವಾದ ದರ್ಶನವೆಂದು ಅನೇಕರು ತಿಳಿದು ಕೊಂಡಿರುವರು. **ಇದು ಪ್ರತ್ಯಕ್ಷವಾಗಿ ಅನುಭವಕ್ಕೆ ಬರತಕ್ಕದ್ದು, ಯಾವ ಧರ್ಮಕ್ಕೂ ವಿರೋಧವಿಲ್ಲ, ಮಾಡಬೇಕಾದ ಸಾಧನವೂ ಬಲುಸುಲಭ, ಫಲವೂ ನಾಶರಹಿತವಾದದ್ದು** ಎಂದು ಗೀತೆಯಲ್ಲಿ ಹೇಳಿರುತ್ತದೆಯಾದರೂ ಜನರು ಇದರಲ್ಲಿ ಪ್ರವೇಶಮಾಡುವದಕ್ಕೆ ಏತರಿಂದಲೋ ಹಿಂಜರಿಯುತ್ತಿರುವರು.

ಲೌಕಿಕದೃಷ್ಟಾಂತಗಳಿಂದ ವಿಷಯವನ್ನು ತಿಳಿಸಿದರೆ ಸುಲಭವಾಗಿ ಮನಸ್ಸಿಗೆ ಹಿಡಿಯುವದೆಂತಲೂ ಅಂಥ ಸುಲಭಶೈಲಿಯಲ್ಲಿ ಬರೆದ ವೇದಾಂತ ಪ್ರಕರಣಗಳೇ ವಿರಳವೆಂತಲೂ ಕೆಲವರು ಅಭಿಪ್ರಾಯಪಟ್ಟಿದ್ದರ ಮೇಲೆ ಈ ಕೊರತೆಯನ್ನು ಸಾಧ್ಯವಾದಮಟ್ಟಿಗೆ ಹೋಗಲಾಡಿಸಬೇಕೆಂಬ ಉದ್ದೇಶದಿಂದ ಈ ಚಿಕ್ಕ ಗ್ರಂಥವನ್ನು ರಚಿಸಲಾಗಿದೆ. ವಿಷಯವನ್ನು ಆದಮಟ್ಟಿಗೂ ಸುಲಭರೀತಿಯಲ್ಲಿ ತಿಳಿಸಲಾಗಿದೆ.

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ತಮ್ಮ ಪೂರ್ವಾಶ್ರಮದಲ್ಲಿಯೇ ಬರೆದು ಪ್ರಕಟಿಸಿದ್ದ ಈ ಪುಸ್ತಕವು **ಆರನೆಯಬಾರಿಗೆ** ಈಗ ಮುದ್ರಿತವಾಗಿ ಹೊರಬಂದಿದೆ. ಪ್ರಾರಂಭಿಕವೇದಾಂತಜಿಜ್ಞಾಸುಗಳಿಗೆ ಇದು ವಿನೋದವಾದ ಕಥೆಗಳ ಮೂಲಕ ಪರಮಾರ್ಥತತ್ತ್ವವನ್ನು ಸರಳರೀತಿಯಲ್ಲಿ ವಿವರಿಸಿ ತಿಳಿಸುತ್ತದೆ. ಪ್ರತಿಯೊಂದು ಕಥೆಗೂ ಪೀಠಿಕೆಯಂತೆ ಕೊಟ್ಟಿರುವ **ವೇದಾಂತಡಿಂಡಿಮ**ದ ಶ್ಲೋಕಗಳು ಸಂದರ್ಭಾನುಗುಣವಾಗಿವೆ. ಈ ಪುಸ್ತಕ ವನ್ನೂ ಶ್ರೀಶ್ರೀಗಳವರು ಕನ್ನಡಿಸಿದ್ದಾರೆ. ಇದರ ಪ್ರತಿಗಳು ಕಾರ್ಯಾಲಯದಲ್ಲಿ ದೊರಕುತ್ತವೆ. ಬೇಕಾದವರು ಬರೆದು ತರಿಸಿಕೊಳ್ಳಬಹುದು.

ವಾಚಕರು ಎಂದಿನಂತೆ ಈ ಗ್ರಂಥವನ್ನೂ ಓದಿ ಪ್ರೋತ್ಸಾಹಿಸಬೇಕಾಗಿ ಕೋರಿದೆ.

ಇತಿ- ಸಜ್ಜನವಿಧೇಯ,

ಹೊಳೆನರಸೀಪುರ. **ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,**

**೨೫. ೩. ೨೦೦೦** **ಅಧ್ಯಾತ್ಮಗ್ರಂಥಾವಳಿಯ ಸಂಪಾದಕ**

# ಕಥೆಗಳ ಪಟ್ಟಿ


| ಸಂಖ್ಯೆ | ಕಥೆ | ಪುಟ |
|---|---|---|
| ೧. | ಗುರುವಾಗಬೇಕೆಂಬ ಯೋಗೀಶ್ವರ | ೧ |
| ೨. | ಮೃಗಾದಿಗಳ ಧ್ವನಿಯನ್ನು ಅನುಕರಿಸುವವನು | ೪ |
| ೩. | ಮುದುಕಿಯ ಸೂಜಿ | ೭ |
| ೪. | ನಾಗರಕಾಟ | ೯ |
| ೫. | ಕಟ್ಟಿಗೆ ಮಾರುವವ | ೧೨ |
| ೬. | ವೈಕುಂಠದವರೂ ಕೈಲಾಸದವರೂ | ೧೪ |
| ೭. | ಭರ್ಜೂವಿನ ಪಿಶಾಚಿ | ೧೭ |
| ೮. | ಈಜುವ ಶಾಸ್ತ್ರ | ೧೯ |
| ೯. | ಉಪದೇಶವನ್ನು ಕೇಳುವ ಶಿಷ್ಯ | ೨೧ |
| ೧೦. | ಗಾಂಧಾರದೇಶದ ಸಾಹುಕಾರ | ೨೩ |
| ೧೧. | ಹಳೆಯ ಕಡತದ ಅರ್ಥ | ೨೫ |
| ೧೨. | ಬಾಯಿವೇದಾಂತ | ೨೮ |
| ೧೩. | ನಿಷ್ಕಾಮಚಕ್ರವರ್ತಿ | ೩೦ |
| ೧೪. | ಮುತ್ತಿನ ಕಂಠಿಯನ್ನು ಕಳೆದುಕೊಂಡ ಹುಡುಗಿ | ೩೨ |
| ೧೫. | ತ್ರಿಪುರಾಸುರಸಂಹಾರ | ೩೫ |
| ೧೬. | ಶುದ್ಧಾತ್ಮರಾಜ | ೩೭ |
| ೧೭. | ಉದಂಕನು ಮೋಸಹೋದದ್ದು | ೪೧ |
| ೧೮. | ಕುರಿಯಾಗಿದ್ದ ಹುಲಿ | ೪೩ |
| ೧೯. | ಹತ್ತು ಜನ ಮಂಕರು | ೪೫ |
| ೨೦. | 'ಹಂ ಗಾಡಿವಾಲ' | ೪೭ |
| ೨೧. | ಜ್ಞಾನ್ಸನ್ನನು ವಾದದಲ್ಲಿ ಸೋತದ್ದು | ೪೮ |
| ೨೨. | ಮನ್ಸೂರ್ ಎಂಬ ಜ್ಞಾನಿಯು | ೫೦ |


------

|| ಓಮ್ ||

# ವೇದಾಂತಕಥಾವಳಿ

## ೧. ಗುರುವಾಗಬೇಕೆಂಬ ಯೋಗೀಶ್ವರ

### ವೇದಾಂತ- ಯೋಗ

**ಯೋಗಿನೋ ಭೋಗಿನೋ ವಾಪಿ ತ್ಯಾಗಿನೋ ರಾಗಿಣೋಽಪಿ ಚ ।**
**ಜ್ಞಾನಾನ್ಮೋಕ್ಷೋ ನ ಸನ್ದೇಹ ಇತಿ ವೇದಾನ್ತಡಿಣ್ಡಮಃ ॥**[1]

ಪೂರ್ವದಲ್ಲಿ ಒಬ್ಬ ಸಾಧುಗಳ ಬಳಿಯಲ್ಲಿ ಒಬ್ಬ ಶಿಷ್ಯನಿದ್ದನು. ಈತನು ಗುರುವಿಗೆ ಮಾಡುತ್ತಿದ್ದ ಸೇವೆಯನ್ನು ನೋಡಿ ಒಬ್ಬ ಯೋಗಿಗೆ ಹೇಗಾದರೂ ಮಾಡಿ ಇವನನ್ನು ತನ್ನ ಶಿಷ್ಯವೃತ್ತಿಗೆ ಜೋಡಿಸಿಕೊಳ್ಳಬೇಕೆಂಬ ಕುತೂಹಲವಾಯಿತು. ಆದುದರಿಂದ ಈ ಯೋಗಿಯು ಒಂದು ದಿನ ಇವನನ್ನು ಕರೆದು ''ನೀನು ಶುದ್ಧಮೂರ್ಖನು, ನಿನ್ನ ಗುರುವು ಶತಮೂರ್ಖನು. ಆ ಗುರುವಿನಲ್ಲಿ ಏನಿದೆಯೆಂದು ಅವನನ್ನು ನಂಬಿ ಕೊಂಡಿದ್ದೀಯೆ ? ಅವನಿಗೆ ಆಕಾಶದಲ್ಲಿ ಓಡಾಡಲು ಬರುವದೆ ? ನೀರಿನ ಮೇಲೆ ನಡೆಯುವದಕ್ಕೆ ಬರುವದೆ ? ಬೆಂಕಿಯ ನಡುವೆ ಕುಳಿತು ಕೊಳ್ಳುವದಕ್ಕೆ ಅವನಿಗೆ ಬರುತ್ತದೆಯೆ ? ಇಂಥ ಸಿದ್ಧಿಗಳು ಯಾವವು ಅವನಲ್ಲಿವೆ ? ಗುರುವಿಗೆ ಮಹಿಮೆ ಇರಬೇಕು, ದುಷ್ಟರನ್ನು ನಿಗ್ರಹ ಮಾಡುವ ಶಕ್ತಿಯಿರಬೇಕು. ಏನೂ ಅರಿಯದ ಕಲ್ಲುಗೊಂಬೆಯಂತೆ ಒಂದು ಕಡೆ ಬಿದ್ದಿರುವವನನ್ನು ಗುರುವೆಂದು ಮಾಡಿಕೊಳ್ಳುವದಕ್ಕೆ ನೀನೆಂಥ ಮುಟ್ಠಾಳನು !'' ಎಂದು ಮುಂತಾಗಿ ಬಯ್ದು ಬೋಧೆಮಾಡಿದನು.

---

1. ಯೋಗಿಯಾಗಲಿ ಭೋಗಿಯಾಗಲಿ ವೈರಾಗ್ಯವುಳ್ಳವನಾಗಲಿ ವಿಷಯ ದಲ್ಲಿ ರಾಗವುಳ್ಳವನಾಗಲಿ - ಎಲ್ಲರಿಗೂ ಜ್ಞಾನದಿಂದಲೇ ಮೋಕ್ಷವೆಂಬುದರಲ್ಲಿ ಸಂದೇಹ ಇಲ್ಲ. ಇದು ವೇದಾಂತದ ಡಂಗುರವು.

ಶಿಷ್ಯನು ಇದನ್ನೆಲ್ಲ ತಾಳ್ಮೆಯಿಂದ ಕೇಳಿ ''ಸ್ವಾಮಿ, ನಮ್ಮ ಗುರುಗಳು ಒಬ್ಬರನ್ನೂ ಬಯ್ಯುವದಿಲ್ಲ, ಸಿಟ್ಟುಮಾಡುವದಿಲ್ಲ, ತಮಗೆ ತಿಳಿದದ್ದನ್ನು ಅಟ್ಟಹಾಸದಿಂದ ಮೆರೆಸು ತೋರಿಸುವದಕ್ಕೆ ಹೋಗುವದಿಲ್ಲ. ಅವರಿಗೆ ಹೆಮ್ಮೆಯಿಲ್ಲ ; ಎಲ್ಲರೂ ಪರಮಾತ್ಮನ ವಿಭೂತಿಗಳೆಂದು ಅವರು ಹೇಳುತ್ತಾರೆ. ಮಕ್ಕಳು, ಪಶುಪಕ್ಷಿಗಳು-ಮುಂತಾದವುಗಳನ್ನು ಕೂಡ ಅವರು ತಕ್ಕಂತೆ ಮಾನಿಸುವರು. ತಮಗೆ ಎಷ್ಟೋ ಅಗಾಧವಾದ ವಿಷಯಗಳು ಗೊತ್ತಿದ್ದರೂ ಏನೂ ತಿಳಿಯದ ಹಸುಗೂಸಿನಂತೆ ತೋರುತ್ತಿರುವರು. ಅವರಿಗೆ ಯಾರೂ ಶತ್ರುಗಳೇ ಇಲ್ಲ. ತಾವು ಅವರನ್ನು ಇಷ್ಟು ಹೀಯಾಳಿಸುತ್ತೀರಷ್ಟೆ ; ಅವರ ಮಟ್ಟಿಗೆ ತಮ್ಮನ್ನೂ ತಮ್ಮಲ್ಲಿರುವ ಯೋಗಶಕ್ತಿಯನ್ನೂ ಎಷ್ಟೋ ಸಲ ಕೊಂಡಾಡಿರುವರು ; ಲೋಕದಲ್ಲಿ ಯಾರೂ ದುಷ್ಟರಿಲ್ಲವೆಂತಲೂ ನಮಗೆ ಇರುವ ಸ್ವಾರ್ಥತೆಯಿಂದಲೇ ನಾವು ಕೆಲವರನ್ನು ದುಷ್ಟರೆಂದೂ ಮತ್ತೆ ಕೆಲವರನ್ನು ಶಿಷ್ಟರೆಂದೂ ಭಾವಿಸುವೆವೆಂತಲೂ ಅವರು ನನಗೆ ತಿಳಿಯಹೇಳಿರುತ್ತಾರೆ. ಅವರ ಬಳಿಯಲ್ಲಿದ್ದು ಅವರ ಬಾಯಿಂದ ಬರುವ ಒಂದೆರಡು ಮಾತನ್ನು ಕೇಳಿದರೆ ಸಾಕು, ನನಗೆ ಇರುವ ಸಂಶಯಗಳೆಲ್ಲವೂ ನಿವಾರಣೆಯಾಗಿಬಿಡುತ್ತವೆ. ಇದರಿಂದಲೇ ನಾನು ಅವರನ್ನು ಗುರುಗಳೆಂದು ಭಾವಿಸಿರುವೆನು'' ಎಂದು ಶಾಂತಿಯಿಂದ ಉತ್ತರಕೊಟ್ಟನಂತೆ.

ವೇದಾಂತದ ಅಭ್ಯಾಸದಿಂದ ಏನೋ ಹೆಚ್ಚಿಗೆಯ ಮಹಿಮೆ ಅಥವಾ ಸಿದ್ಧಿಯು ದೊರೆಯುವದೆಂಬ ಆಸೆಯಿಟ್ಟುಕೊಂಡಿರುವವರೆಲ್ಲರೂ ಮುಖ್ಯವಾಗಿ ಕಲಿಯಬೇಕಾದ ಮೊದಲನೆಯ ಪಾಠವೇ ಇದು. ವೇದಾಂತದಿಂದ ಯಾವ ಸಿದ್ಧಿಯೂ ಆಗುವದಿಲ್ಲ ; ಕೈಕಾಲುಗಳ ಸಂಖ್ಯೆಯು ಹೆಚ್ಚುವದಿಲ್ಲ, ಅಥವಾ ಕಡಿಮೆಯಾಗುವದಿಲ್ಲ. ಊಟಉಪಚಾರಗಳಲ್ಲಾಗಲಿ, ನಡೆನುಡಿಗಳಲ್ಲಾಗಲಿ, ವೇದಾಂತಿಗಳಿಗೂ ಉಳಿದವರಿಗೂ ಯಾವ ಹೆಚ್ಚುಕಡಿಮೆಯೂ ಇರುವದಿಲ್ಲ. ವೇದಾಂತದಿಂದ ಆಯುಸ್ಸು ಹೆಚ್ಚುವದಿಲ್ಲ ; ವಿಲಕ್ಷಣವಾದ ಜ್ಯೋತಿ- ಮೊದಲಾದವು ಕಾಣಿಸುವದಿಲ್ಲ ; ಅನ್ನಾಹಾರಗಳನ್ನು ಬಿಟ್ಟಿರುವದಕ್ಕೆ ಬರುವದಿಲ್ಲ ; ನೆಲದಲ್ಲಿ ಹೂಳಿಸಿಕೊಂಡೂ ಸಾಯದೆ ಇರುವ ಶಕ್ತಿ

ಬರುವದಿಲ್ಲ ; ನೀರಿನಮೇಲೆ ನಡೆಯುವದಕ್ಕಾಗಲಿ ಬಂಡೆಯಂತೆ ಬಿಸಿಲು, ಚಳಿ, ಗಾಳಿ, ಮಳೆ - ಇವುಗಳನ್ನು ಲೆಕ್ಕಿಸದೆ ಮಲಗಿರುವದಕ್ಕಾಗಲಿ, ಆಕಾಶದಲ್ಲಿ ಹಾರಾಡುವದಕ್ಕಾಗಲಿ ಬರುವದಿಲ್ಲ. ಇದೆಲ್ಲ ಪುರುಷಾರ್ಥವಾಗಿರಲಿ, ಆಗದಿರಲಿ ; ವೇದಾಂತದಿಂದಂತೂ ಇವುಗಳಲ್ಲಿ ಯಾವದೂ ಆಗುವದಿಲ್ಲವೆಂಬುದು ಖಂಡಿತ.

'ಹಾಗಾದರೆ ವೇದಾಂತಿಗಳಲ್ಲಿರುವ ವಿಶೇಷವೇನು ?'- ಎಂದು ಯಾರಾದರೂ ಕೇಳಬಹುದು. ಗಣಿತಶಾಸ್ತ್ರವನ್ನು ಬಲ್ಲವರಿಗೂ ಕುರಿಯ ಹಿಕ್ಕೆಯಿಂದ ಎಣಿಕೆಮಾಡಿ ಲೆಕ್ಕಾಚಾರಮಾಡಿಕೊಳ್ಳುವ ಕುರುಬರಿಗೂ ತಿಳಿವಳಿಕೆಯಲ್ಲಿ ಬಿಟ್ಟರೆ ಮತ್ತೇತರಲ್ಲಿ ಹೆಚ್ಚುಕಡಿಮೆ ಇರುವದು ? ವೇದಾಂತಿಗಳಿಗೂ ಮಿಕ್ಕವರಿಗೂ ಇರುವ ತಾರತಮ್ಯವನ್ನೂ ಇದರಂತೆಯೇ ತಿಳಿಯಬೇಕು. ಸಿದ್ಧಿಯೇ ಮುಂತಾದವುಗಳನ್ನು ಹೇಳಿರುವದು ಯೋಗಶಾಸ್ತ್ರದಲ್ಲಿ ; ವೇದಾಂತದ ತಿಳಿವಳಿಕೆಯನ್ನು ಹೇಳಿರುವದು ಉಪನಿಷತ್ತುಗಳಲ್ಲಿ. ಈ ಗುಟ್ಟನ್ನು ಅರಿಯದೆ ವೇದಾಂತಿಗಳೆಂದರೆ ಮೂಗುಹಿಡಿದು ಕೂರುವವರೆಂತಲೋ ಭಂಗಿ ಸೇದುವವರೆಂತಲೋ ಕೆಲವರು ಮೂಢರು ಎಣಿಸುವರು. ಪ್ರಾಣಾಯಾಮಕ್ಕಾಗಿ ಮೂಗುಹಿಡಿಯುವದನ್ನೂ ಮನಸ್ಸನ್ನು ಸರಿಪಡಿಸುವದಕ್ಕೆಂದು ಕೆಲವು ಮೂಲಿಕೆಗಳನ್ನು ಉಪಯೋಗಮಾಡಿಕೊಳ್ಳುವದನ್ನೂ ಯೋಗದಲ್ಲಿ ಹೇಳಿರುವದು ನಿಜವೇ ; ಆದರೆ ವೇದಾಂತಿಗಳಿಗೆ ಇದರ ಗೋಜು ಎಳ್ಳಷ್ಟೂ ಬೇಕಿಲ್ಲವೆಂದು ಖಂಡಿತವಾಗಿ ತಿಳಿಯಬೇಕು.

ವೇದದ ಕೊನೆಯ ಭಾಗದಲ್ಲಿ ವಿಶೇಷವಾಗಿ ಇರುವ ಉಪನಿಷತ್ತುಗಳಲ್ಲಿ ಹೇಳಿರುವ ಸಿದ್ಧಾಂತಕ್ಕೆ **ವೇದಾಂತ**ವೆಂದು ಹೆಸರು. ಸಿದ್ಧಾಂತವೆಂದರೆ ನಿರ್ಣಯಿಸುವ ವಿಷಯ. ಈ ಸಿದ್ಧಾಂತವನ್ನೇ ಬಾದರಾಯಣವ್ಯಾಸರು ಬರೆದಿರುವ ಬ್ರಹ್ಮಸೂತ್ರಗಳಲ್ಲಿ ಕ್ರಮಪಡಿಸಿ ತಿಳಿಸಿರುತ್ತದೆ. ಮಹಾಭಾರತದಲ್ಲಿರುವ ಭಗವದ್ಗೀತೆಯಲ್ಲಿಯೂ ವಿಸ್ತರಿಸಿರುತ್ತದೆ. ಉಪನಿಷತ್ತು, ಬ್ರಹ್ಮಸೂತ್ರಗಳು, ಭಗವದ್ಗೀತೆ - ಇವು ಮೂರೂ

ವೇದಾಂತಸಿದ್ಧಾಂತವನ್ನು ತಿಳಿಸುವದಕ್ಕೆ ಬೇರೆಬೇರೆ ಬಗೆಯಿಂದ ಹೊರಟಿವೆಯಾದ್ದರಿಂದ ಇವುಗಳನ್ನು **ಪ್ರಸ್ಥಾನತ್ರಯ**ವೆಂದು ಕರೆಯುವರು. ಮಿಕ್ಕ ಗ್ರಂಥಗಳಿಗೆಲ್ಲ ಇವುಗಳೇ ಆಧಾರ. ಅದರಲ್ಲಿಯೂ ಉಪನಿಷತ್ತುಗಳು ಎಲ್ಲಕ್ಕೂ ಆಧಾರವಾದ್ದರಿಂದ ಅವನ್ನೇ ವೇದಾಂತಗಳೆಂದು ಕರೆಯುವದೂ ಉಂಟು. ಬಾದರಾಯಣರು ಸೂತ್ರಗಳಲ್ಲಿ ತಿಳಿಸಿರುವ ವೇದಾಂತದ ನಿರ್ಣಯಕ್ಕೆ **ವೇದಾಂತದರ್ಶನ**ವೆಂದು ಹೆಸರು. ಬ್ರಹ್ಮಜ್ಞಾನವಾದ ಹೊರತು ಯಾರಿಗೂ ಪರಮಗತಿಯಾಗದೆಂದು ಈ ದರ್ಶದಲ್ಲಿ ಮನಗಾಣಿಸಿಕೊಟ್ಟಿರುತ್ತದೆ.

------

# ೨. ಮೃಗಾದಿಗಳ ಧ್ವನಿಯನ್ನು ಅನುಕರಿಸುವವನು

## ಸತ್ಯ - ಮಿಥ್ಯೆ

**ಯನ್ನಾದೌ ಯಚ್ಚ ನಾಸ್ತ್ಯನ್ತೇ ತನ್ಮಧ್ಯೇ ಭಾತಮಪ್ಯಸತ್ ।**
**ಅತೋ ಮಿಥ್ಯಾ ಜಗತ್ಸರ್ವಮಿತಿ ವೇದಾನ್ತಡಿಣ್ಡಿಮಃ ॥**

**ಯದಸ್ತ್ಯಾದೌ ಯದಸ್ತ್ಯನ್ತೇ ಯನ್ಮಧ್ಯೇ ಭಾತಿ ತತ್ಸ್ವಯಮ್ ।**
**ಬ್ರಹ್ಮೈವೈಕಮಿದಂ ಸತ್ಯಮಿತಿ ವೇದಾನ್ತಡಿಣ್ಡಿಮಃ ॥**[1]

ಒಂದೂರಿಗೆ ಒಬ್ಬ ಪ್ರಾಣಿಗಳ ಧ್ವನಿಯನ್ನು ಅನುಕರಿಸಬಲ್ಲ ಆಟಗಾರನು ಬಂದನು. ಅಲ್ಲಿಯ ಜನರೆಲ್ಲರೂ ಸೇರಿ ಒಂದಾಟವನ್ನು

1. ಯಾವದು ಮೊದಲಿರಲಿಲ್ಲವೋ ಯಾವದು ಕೊನೆಗೂ ಇರುವದಿಲ್ಲವೋ ಅದು ನಡುವೆ ಇರುವಂತೆ ತೋರಿದರೂ ನಿಜವಾಗಿರುವದಲ್ಲ ; ಆದುದರಿಂದ ಜಗತ್ತೆಲ್ಲವೂ ಮಿಥ್ಯೆಯೆಂಬುದು ವೇದಾಂತದ ಡಂಗುರವು. ಯಾವದು ಮೊದಲು ಇತ್ತೋ ಯಾವದು ಕೊನೆಯಲ್ಲಿಯೂ ಇರುವದೋ ಯಾವದು ಮಧ್ಯದಲ್ಲಿಯೂ ತಾನೇ ತೋರಿಕೊಳ್ಳುತ್ತಿರುವದೋ ಅಂಥ ಬ್ರಹ್ಮವೊಂದೇ ಸತ್ಯವೆಂದು ವೇದಾಂತದ ಡಂಗುರವು.

ಆಡಿಸಲು ಆತನು ಹಂದಿಯ ಹಾಗೆ ಕೂಗಿದನು. ಎಲ್ಲರಿಗೂ ನಿಜವಾದ ಹಂದಿಯು ಕೂಗಿದ ಹಾಗೆಯೇ ಕೇಳಿಸಿತು. ಅವರು ಬಲುಸಂತೋಷಪಟ್ಟು ಮತ್ತೆಮತ್ತೆ ಆ ಹಂದಿಯ ಕೂಗನ್ನು ಕೇಳುವದಕ್ಕೆ ಕುತೂಹಲವನ್ನು ತೋರಿಸಿದರು.

ಆಗ ಅಲ್ಲಿದ್ದವರಲ್ಲಿ ಒಬ್ಬನು ಜನರ ಹುಚ್ಚಿಗೆ ಬೇಸರಪಟ್ಟು ಒಂದು ಹಂದಿಯ ಮರಿಯನ್ನು ತಂದು ಅದನ್ನು ಜಿಗುಟಿ ಕೂಗಿಸಿದನು. ಜನರು 'ಛೇ ! ಹಂದಿಯ ಕೂಗನ್ನು ನಾವೆಂದೂ ಕೇಳಿಲ್ಲವೆ ? ಇದೇನು ಹೊಸ ವಿದ್ಯೆಯೆಂದು ನಮಗೆ ತೋರಿಸುವದಕ್ಕೆ ಬಂದೆ ?' ಎಂದು ಅವನನ್ನು ಧಿಕ್ಕರಿಸಿದರು. ಆಗ ಆತನು 'ಅಯ್ಯ, ನಾನು ತಿಳಿಸಿದ್ದು ನಿಮಗೆ ಹೊಸ ವಿಷಯವೇ. ಹೇಗೆಂದರೆ : ನಿಮಗೆ ನಿಜವನ್ನು ಕಂಡರೆ ಬೇಸರ ; ಅದನ್ನು ಅಣಕಿಸುವ ಸುಳ್ಳುತೋರಿಕೆಯೆಂದರೆ ಬಲು ಅಕ್ಕರೆ. ಈ ವಿಷಯವು ಹೊಸ ದಲ್ಲವೆ ?' ಎಂದು ಉತ್ತರಕೊಟ್ಟನಂತೆ.

ಇದೇ ನಮಗೆ ವೇದಾಂತವು ಹೇಳಿಕೊಡುವ ಎರಡನೆಯ ಪಾಠವು. ನಮಗೆಲ್ಲ ತೋರಿಕೆಯ ವಸ್ತುಗಳಲ್ಲಿ ಹೆಚ್ಚು ಪ್ರೀತಿಯುಂಟಾಗುತ್ತಿರುವದು. ಕಪ್ಪೆಯಚಿಪ್ಪು ಬೆಳ್ಳಿಯಂತೆಯೂ ಬಿಸಿಲುಕುದುರೆಯು ನೀರಿನಂತೆಯೂ ತೋರುವದುಂಟು. ಜನರು ಕಪ್ಪೆಯಚಿಪ್ಪನ್ನು ಬೆಳ್ಳಿಯೆಂದು ತಿಳಿದು ಅವು ಗಳನ್ನು ಆಯ್ದುಕೊಳ್ಳುವದಕ್ಕೆ ಹೋಗುವರು. ಬಿಸಿಲುಕುದುರೆಯನ್ನು ನೀರೆಂತ ಭ್ರಮಿಸಿ ಬಾಯಾರಿಕೆಯನ್ನು ತೀರಿಸಿಕೊಳ್ಳುವದಕ್ಕೆಳಸುವರು. ತೋರಿಕೆಯ ವಸ್ತುಗಳಮೇಲೆ ನಮ್ಮೆಲ್ಲರಿಗೂ ಇರುವಷ್ಟು ಪ್ರೀತಿಯು ನಿಜವಾದ ವಸ್ತುಗಳಮೇಲೆ ಇಲ್ಲ. ಆದರೆ ನಾವು ಹೀಗೆಂದು ಅರಿಯೆವು.

ನಿಜವಾಗಿರುವ ವಸ್ತುಗಳಿಗೆ **ಸತ್ಯ**ವಸ್ತುಗಳೆಂತಲೂ ತೋರಿಕೆಯ ವಸ್ತುಗಳಿಗೆ **ಮಿಥ್ಯಾ**ವಸ್ತುಗಳೆಂತಲೂ ಹೆಸರು. ಮಿಥ್ಯೆಯೆಂದರೆ ಸುಳ್ಳು. ಸುಳ್ಳುವಸ್ತುವೂ ಮೊದಲು ನಿಜವೆಂದೇ ತೋರುವದು. ನಿಜವನ್ನು ವಿಚಾರಿಸದೆ ಭ್ರಾಂತಿಯ ತೋರಿಕೆಯನ್ನು ಅದು ತೋರಿಸಿದಂತೆಯೇ

ನಿಜವಾಗಿಯೂ ಇರುವದೆಂದು ತಪ್ಪಾಗಿ ತಿಳಿದುಕೊಳ್ಳುವದಕ್ಕೆ ವೇದಾಂತದಲ್ಲಿ **ಮಿಥ್ಯಾಜ್ಞಾನ**ವೆಂದು ಹೆಸರು.

'ಸತ್' ಮತ್ತು 'ಅಸತ್' ಎಂಬೆರಡು ಮಾತುಗಳನ್ನೂ ಇಲ್ಲಿ ತಿಳಿಯಬೇಕು. 'ಸತ್' ಎಂದರೆ ಇರುವ ವಸ್ತು. ಈ ಮಾತಿನ ಭಾವನಾಮವು 'ಸತ್ತ್ವ', 'ಸತ್ತೆ' (ಇರವು, ಇರೋಣ, ಇರುವಿಕೆ) ಎಂದಾಗುವದು. 'ಅಸತ್' ಎಂದರೆ ಇಲ್ಲದ್ದು, ಉದಾಹರಣೆಗೆ : ಮೊಲದ ಕೊಂಬು ಎಲ್ಲಿಯೂ ಇಲ್ಲ, ಆದ್ದರಿಂದ ಇದು ಅಸತ್ತು. ಮೊದಲು ಇರುವಂತೆ ತೋರಿ ವಿಚಾರಿಸಿದರೆ ಇಲ್ಲವಾಗುವ ಸತ್ತೆಗೆ **ಪ್ರಾತಿಭಾಸಿಕಸತ್ತೆ** (ತೋರಿಕೆಯ ಇರವು) ಎಂದು ಹೆಸರು. ಹಗ್ಗದಲ್ಲಿ ತೋರುವ ಹಾವು, ಕನ್ನಡಿಯೊಳಗೆ ಕಾಣುವ ಮುಖ, ಆಕಾಶದಲ್ಲಿ ಕಾಣುವ ನೀಲಿಯ ಬಣ್ಣ, ಕಣ್ಣುಮಬ್ಬಾದವರಿಗೆ ತೋರುವ ಎರಡನೆಯ ಚಂದ್ರ - ಇವುಗಳ ಸತ್ತೆಯು ಪ್ರಾತಿಭಾಸಿಕ. ಇವುಗಳು ತಟ್ಟನೆ ನೋಡಿದರೆ ಇರುವಂತೆ ತೋರಿದರೂ ಚೆನ್ನಾಗಿ ನೋಡಿದಮೇಲೆ ನಿಜವಾಗಿ ಇಲ್ಲವೆಂದು ಗೊತ್ತಾಗುವದು.

ಚೆನ್ನಾಗಿ ನೋಡಿ ಇದ್ದದ್ದನ್ನು ಇದ್ದಂತೆ ತಿಳಿಯುವದಕ್ಕೆ **ಸಮ್ಯಗ್ ಜ್ಞಾನ**ವೆಂತಲೂ **ತತ್ತ್ವಜ್ಞಾನ**ವೆಂತಲೂ ಹೆಸರು. 'ತತ್' ಎಂದರೆ ಅದು ; 'ತತ್ತ್ವ'ವೆಂದರೆ ಅದರ ನಿಜವಾದ ಸ್ವಭಾವ. ಪ್ರಪಂಚದ ನಿಜವಾದ ಸ್ವಭಾವವನ್ನು ನೋಡಿ ವೇದಾಂತಿಗಳು ಇದರ ತತ್ತ್ವವನ್ನು ಗೊತ್ತುಮಾಡಿರುತ್ತಾರೆ. ಪ್ರಪಂಚವೆಂಬುದು ನಿಜವಾಗಿದ್ದುಕೊಂಡಿರುವ ಬ್ರಹ್ಮವೆಂಬ ವಸ್ತುವಿನ ತೋರಿಕೆಯೆಂಬುದೇ ಅವರ ನಿರ್ಣಯ. ಆದ್ದರಿಂದ ಬ್ರಹ್ಮವೇ ಸತ್ಯವೆಂದೂ ಪ್ರಪಂಚವು ಮಿಥ್ಯೆಯೆಂದೂ ಅವರು ಹೇಳುತ್ತಾರೆ. ಇದ್ದದ್ದನ್ನು ಇದ್ದಂತೆ ಗೊತ್ತುಮಾಡುವದರಿಂದ ವೇದಾಂತಶಾಸ್ತ್ರವನ್ನು **ತತ್ತ್ವಶಾಸ್ತ್ರ**ವೆಂದೂ ಕರೆಯುವದುಂಟು.

------

# ೩. ಮುದುಕಿಯ ಸೂಜಿ

## ಆತ್ಮ - ಅನಾತ್ಮ

**ಆತ್ಮಾನಾತ್ಮೌ ಪದಾರ್ಥೌ ದ್ವೌ ಭೋಕ್ತೃಭೋಗ್ಯತ್ವಲಕ್ಷಣೌ ।**
**ಬ್ರಹ್ಮೈವಾತ್ಮಾ ನ ದೇಹಾದಿರಿತಿ ವೇದಾನ್ತಡಿಣ್ಡಿಮಃ ॥**[1]

ಒಬ್ಬ ಮುದುಕಿಯು ಒಂದು ದಿನ ಸಂಜೆಯಲ್ಲಿ ತನ್ನದೊಂದು ಚಿಕ್ಕ ಸೂಜಿಯನ್ನು ಮನೆಯಲ್ಲಿ ಎಲ್ಲಿಯೋ ಕೆಡವಿಕೊಂಡಳು. ಆಕೆಯು ಅದನ್ನು ಹುಡುಕುವದಕ್ಕೆ ಮೊದಲುಮಾಡಿ ಹೊರಕ್ಕೆ ಬಂದು ರಾತ್ರಿಯಾಗುತ್ತಲೂ ಬೀದಿಯಲ್ಲೆಲ್ಲ ಹುಡುಕುವದಕ್ಕೆ ಹೋದಳು.

ಆಗ ದಾರಿಹೋಕನೊಬ್ಬನು ''ಏನು ಕಳೆದುಕೊಂಡಿದ್ದೀಯಮ್ಮ ?'' ಎಂದು ಕೇಳಿದನು. ಆಕೆಯು 'ಅಯ್ಯಾ, ಒಂದು ಸಣ್ಣ ಸೂಜಿ ಕಳೆದು ಹೋಗಿದೆ ; ಎಷ್ಟೋ ಹೊತ್ತಿನಿಂದ ಹುಡುಕುತ್ತಿದ್ದೇನೆ, ಸಿಕ್ಕಿಲ್ಲ. ನೀನಾದರೂ ಹುಡುಕಿ ಕೊಡಪ್ಪ' ಎಂದಳು. ಆತನು ತುಂಬ ಕನಿಕರದಿಂದ 'ಅಮ್ಮ, ಇದು ರಾತ್ರಿಯ ವೇಳೆ, ಕಳೆದುಕೊಂಡಿರುವದು ಸೂಜಿ. ಹೀಗಿರುವದರಿಂದ ಅದನ್ನು ಎಲ್ಲೆಂದು ಹುಡುಕುವದು ? ಇದಿರಲಿ, ನಿನ್ನ ಸೂಜಿಯನ್ನು ಯಾವಾಗ, ಎಲ್ಲಿ ಕೆಡವಿಕೊಂಡೆ ? ಹೇಳು' ಎಂದು ಕೇಳಿದನು. ಮುದುಕಿಯು 'ಸ್ವಲ್ಪ ಹೊತ್ತಿನ ಹಿಂದೆ ಚಿಕ್ಕಮನೆಯಲ್ಲಿ ಕೆಡವಿಕೊಂಡೆ' ಎಂದು ಹೇಳಿದಳು. ಆಗ ದಾರಿಹೋಕನು ಫಕಾರನೆ ನಕ್ಕು 'ಸರಿ ಯಾಯಿತು, ಒಳಗೆ ಕಳೆದುಕೊಂಡು ಹೊರಗೆ ಹುಡುಕುವದೆ ? ಮನೆಯಲ್ಲಿಯೇ ಏತಕ್ಕೆ ಹುಡುಕಲಿಲ್ಲ ?'' ಎಂದು ಕೇಳಲು, ಆ ಬೆಪ್ಪಳು ''ಅಯ್ಯ, ಮನೆಯಲ್ಲಿ ದೀಪವಿಲ್ಲ. ಇಲ್ಲಿ ಊರ ದೀಪವಿದೆ. ಬೆಳಕಿದ್ದ ಕಡೆ ಹುಡುಕದೆ ಕತ್ತಲೆಯಲ್ಲಿ ಹುಡುಕಿ ಫಲವೇನು ?'' ಎಂದು ಉತ್ತರ ಕೊಟ್ಟಳಂತೆ !

---

1. ಆತ್ಮ ಮತ್ತು ಅನಾತ್ಮ - ಎಂದು ಪದಾರ್ಥಗಳು ಎರಡು. ಇವುಗಳಲ್ಲಿ ಆತ್ಮವು ಅನುಭವಿಸುವದು, ಅನಾತ್ಮವು ಅನುಭವಿಸಲ್ಪಡುವದು. ಬ್ರಹ್ಮವೇ ಆತ್ಮನು ದೇಹವೇ ಮುಂತಾದವುಗಳು ಅಲ್ಲ - ಎಂಬುದು ವೇದಾಂತದ ಡಂಗುರವು.

ನಿಜವಾಗಿ ಜನರು ಪ್ರಪಂಚದ ತತ್ತ್ವವನ್ನು ಹುಡುಕುವದಕ್ಕೆ ಮುದುಕಿಯ ಹಾದಿಯನ್ನೇ ಹಿಡಿಯುತ್ತಿರುವರು. ಏಕೆಂದರೆ ಪ್ರಪಂಚದ ತತ್ತ್ವವು ಅವರಲ್ಲಿಯೇ ಇರುವದು ; ಆದರೂ ಆ ತಮ್ಮ ಸ್ವರೂಪವನ್ನು ತಿಳಿದುಕೊಳ್ಳಲಾರದೆ ಅಲ್ಲಿ ಅಜ್ಞಾನವೆಂಬ ಕತ್ತಲೆ ಇದೆ ಎಂದು ಹೆದರಿ ಹೊರಗೆ ನೋಡುತ್ತಿರುವರು. ನಮಗೆಲ್ಲರಿಗೂ ಎಚ್ಚರ, ಕನಸು, ಬರಿಯ ನಿದ್ರೆ- ಎಂಬ ಮೂರು ಅವಸ್ಥೆಗಳಿರುವವಷ್ಟೆ. ಇವು ಮೂರನ್ನೂ ವಿಚಾರಿಸಿದರೆ ಪ್ರಪಂಚವನ್ನೇ ವಿಚಾರಿಸಿದಂತೆ ; ಹಾಗಿಲ್ಲದೆ ಹೊರಗೆ ತೋರುವ ಪದಾರ್ಥಗಳನ್ನು ಮಟ್ಟಿಗೆ ಸುಮ್ಮನೆ ವಿಚಾರಿಸುತ್ತಿದ್ದರೆ ಎಂದಿಗೂ ತತ್ತ್ವವು ಸಿಕ್ಕುವದಿಲ್ಲ. ಹೀಗೆಂದು ವೇದಾಂತಿಗಳು ಗೊತ್ತುಮಾಡಿರುವರು.

''ತನ್ನ ವಸ್ತುಗಳನ್ನು ವಿಚಾರಮಾಡಿದಷ್ಟಕ್ಕೇ ಪ್ರಪಂಚದ ತತ್ತ್ವವನ್ನೇ ಅರಿತಂತಾದೀತೆ ? ಮಿಕ್ಕವರ ಅನುಭವವನ್ನು ತೆಗೆದುಕೊಳ್ಳದೆಯೇ ಈ ಪ್ರಪಂಚದ ಆದ್ಯಂತತತ್ತ್ವವನ್ನು ಅದರಲ್ಲಿ ಈಗೀಗ ಹುಟ್ಟಿರುವವನೊಬ್ಬನು ನಿರ್ಣಯಿಸುವದೆಂಬುದು ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿದರೆ ಮತ್ತೊಬ್ಬರಿಗೆ ಕಾಣಿಸದೆಂದು ತಿಳಿದಂತಲ್ಲವೆ ?'' ಎಂದು ಕೆಲವರಿಗೆ ಸಂಶಯವು ಬರಬಹುದು. 'ಆತ್ಮಾನಾತ್ಮವಿವೇಕವಿಲ್ಲದಿರುವದೇ, ಈ ಸಂಶಯಕ್ಕೆ ಕಾರಣ. **'ಆತ್ಮ'**ನೆಂದರೆ ತಾನು ; 'ಅನಾತ್ಮ'ವೆಂದರೆ ತಾನಲ್ಲದ್ದು; **ಆತ್ಮಾನಾತ್ಮವಿವೇಕ**ವೆಂದರೆ ತಾನು, ತಾನಲ್ಲದ್ದು - ಇವುಗಳನ್ನು ಬಿಡಿಸಿ ತಿಳಿಯುವದು. ಈ ತಿಳಿವಳಿಕೆಯು ಇದ್ದವರಿಗೆ ಮೇಲಿನ ಸಂಶಯವು ಬರುವದಿಲ್ಲ. ತನಗೆ ತೋರುವದೆಲ್ಲ ಅನಾತ್ಮವೇ, ತಾನಲ್ಲವೇ ಅಲ್ಲ. ಉದಾಹರಣೆಗೆ : ರಾಮನೆಂಬವನಿಗೆ ತತ್ತ್ವವನ್ನು ತಿಳಿದುಕೊಳ್ಳಬೇಕೆಂಬ ಆಸೆಯಿದೆ ಎಂದು ಇಟ್ಟುಕೊಳ್ಳೋಣ. ಇಂಥ ಆಸೆಯುಳ್ಳಾತನಿಗೆ **ಜಿಜ್ಞಾಸು**ವೆಂದು ಹೆಸರು. ಈ ಜಿಜ್ಞಾಸುವಿಗೆ ತೋರುವದೊಂದೂ ರಾಮನ ಸ್ವರೂಪವಲ್ಲ ; ಆದ್ದರಿಂದ ಅದೆಲ್ಲ ಅನಾತ್ಮವೇ ; ಆತ್ಮನಲ್ಲಿ ಅನಾತ್ಮವು ಸೇರುವದಿಲ್ಲ ; ಅನಾತ್ಮದಲ್ಲಿ ಆತ್ಮನು ಸೇರುವದಿಲ್ಲ. ಆತ್ಮನಲ್ಲದ್ದೆಲ್ಲ ಅನಾತ್ಮದಲ್ಲಿ ಅಡಕವಾಗಿರಬೇಕು. ಜಿಜ್ಞಾಸುವಾದವನು ನೋಡುವ

ಮನುಷ್ಯರು, ಪ್ರಾಣಿಗಳು, ಗಿಡಮರಗಳು, ಕಲ್ಲುಮಣ್ಣು - ಮೊದಲಾದ ವಸ್ತುಗಳು - ಇಷ್ಟೇಕೆ ? ಅವನಿಗೆ ತೋರುವ ತನ್ನ ಶರೀರ, ಮನಸ್ಸು - ಮುಂತಾದವುಗಳು ಕೂಡ ಅನಾತ್ಮವೇ. ಹೀಗಿರುವಾಗ ಆತ್ಮ ಮತ್ತು ಅನಾತ್ಮ - ಇವೆರಡನ್ನು ಬಿಟ್ಟರೆ ಮತ್ತೇನು ಉಳಿದೀತು ? ಏನೂ ಇಲ್ಲ. ಆದ್ದರಿಂದ ಇವುಗಳನ್ನು ಕುರಿತು ಆಲೋಚಿಸಿದರೆ ಎಲ್ಲವನ್ನೂ ಆಲೋಚಿಸಿದಂತಾಯಿತು. ಈ ಅನಾತ್ಮವೆಂಬುದು ಜಾಗ್ರತ್ತು (ಎಚ್ಚರ), ಸ್ವಪ್ನ (ಕನಸು), ಸುಷುಪ್ತಿ (ಬರಿಯ ನಿದ್ರೆ) - ಈ ಮೂರವಸ್ಥೆಗಳೊಳಗೇ ಸೇರಿರುವದರಿಂದ, ಈ ಮೂರವಸ್ಥೆಗಳನ್ನು ವಿಚಾರಮಾಡಿಬಿಟ್ಟರೆ ಪ್ರಪಂಚವನ್ನೇ ವಿಚಾರಮಾಡಿದಂತಾಯಿತೆಂಬುದು ಸರಿಯೇ ಆಗಿದೆ. ಈ ಮಾರ್ಗವನ್ನೇ ವೇದಾಂತಿಗಳು ಅನುಸರಿಸಿ ತತ್ತ್ವವನ್ನು ಕಂಡುಹಿಡಿದಿರುವರು.

------

# ೪. ನಾಗರ ಕಾಟ

## ಜ್ಞಾನ - ಕರ್ಮ

**ನ ವರ್ಣಾಶ್ರಮಸಜ್ಞೈರ್ನ ಕರ್ಮೋಪಾಸನಾದಿಭಿಃ ।**
**ಬ್ರಹ್ಮಜ್ಞಾನಂ ವಿನಾ ಮೋಕ್ಷ ಇತಿ ವೇದಾನ್ತಡಿಣ್ಡಿಮಃ ॥**[1]

ಒಂದು ಹಳ್ಳಿಯಲ್ಲಿ ಒಬ್ಬ ಕುರುಬನಿದ್ದನು. ಅವನ ಹಿತ್ತಲಲ್ಲಿ ಯಾರೋ ಒಂದು ತುಂಡುಹಗ್ಗವನ್ನು ಹಾಕಿದ್ದರು. ಕುರುಬನು ಇದರ ಕಡೆಗೆ ಅಷ್ಟು ಲಕ್ಷ್ಯಕೊಡದೆ ಇದ್ದದ್ದರಿಂದ ಅದು ಎಷ್ಟೋ ಕಾಲದಿಂದ

---

1. ಬ್ರಾಹ್ಮಣ ಮುಂತಾದ ವರ್ಣಕ್ಕೆ ಸೇರಿದವನೆಂದು ಅಥವಾ ಬ್ರಹ್ಮಚರ್ಯವೇ ಮುಂತಾದ ಆಶ್ರಮದಲ್ಲಿರುವೆನೆಂದು ಹೆಸರಿಟ್ಟುಕೊಂಡಮಟ್ಟಿಗೇ ಆಗಲಿ, ಕರ್ಮವನ್ನು, ಉಪಾಸನೆಗಳನ್ನು ಅಥವಾ ಮತ್ತೆ ಯಾವ ಅನುಷ್ಠಾನಗಳನ್ನು ನಡೆಯಿಸುವದರಿಂದಾಗಲಿ ಮೋಕ್ಷವಾಗಲಾರದು, ಬ್ರಹ್ಮಜ್ಞಾನದಿಂದಲೇ ಮೋಕ್ಷವೆಂಬುದು ವೇದಾಂತದ ಡಂಗುರವು.

ಬಿದ್ದಲ್ಲಿಯೇ ಬಿದ್ದಿತ್ತು. ಕುರುಬನಿಗೆ ತೊಂಬತ್ತುವರ್ಷದ ಅಜ್ಜಿಯೊಬ್ಬಳಿದ್ದಳು. ಆಕೆಗೆ ಕಣ್ಣಿನಲ್ಲಿ ದೃಷ್ಟಿಪಾಟವವು ಕಡಿಮೆಯಾದದ್ದರಿಂದಲೂ, ಅವಳು ಮಬ್ಬುಗತ್ತಲೆಯ ಹೊತ್ತಿನಲ್ಲಿಯೇ ಆಗಾಗ್ಗೆ ಹಿತ್ತಲಕಡೆಗೆ ಹೋಗುತ್ತಿದ್ದದ್ದರಿಂದಲೂ ಹಿತ್ತಲಲ್ಲಿ ಒಂದು ಹಾವಿದೆಯೆಂದು ಹೇಗೋ ಒಂದು ದಿನ ಮನಸ್ಸಿಗೆ ತಂದುಕೊಂಡಳು. ಆಮೇಲೆ ಮುದುಕಿಗೆ ಹಿತ್ತಲುಕಡೆಗೆ ಕಾಲಿಡುವದಕ್ಕೇ ಭಯವಾಯಿತು. ಒಂದು ದಿನ ಮೊಮ್ಮಗನನ್ನು ಕರೆದು "ಅಪ್ಪಾ, ಆ ಹಾಳು ಹಾವನ್ನು ಹೊಡೆದುಹಾಕಬಾರದೆ ? ನನಗೆ ಆ ಕಡೆಗೆ ಹೋಗುವದಕ್ಕೇ ದಿಗಿಲಾಗುವದಲ್ಲ !" ಎಂದು ಹೇಳಿದಳು.

ಅವನು ನೋಡಿದಾಗ ಎಂದೂ ಹಾವು ಕಂಡಿರಲಿಲ್ಲವಾದ್ದರಿಂದಲೂ ಹಿತ್ತಲಲ್ಲಿ ಗಿಡಗಂಟೆಗಳಾಗಲಿ ಹುತ್ತಬಿಲಗಳಾಗಲಿ ಇರಲಿಲ್ಲವಾದ್ದರಿಂದಲೂ ಅಲ್ಲಿ ಹಾವು ಓಡಾಡುತ್ತಿರುವದೆಂಬುದರಲ್ಲಿ ಅವನಿಗೆ ನಂಬಿಕೆಯಿರಲಿಲ್ಲ. ಆದರೂ ಅಜ್ಜಿಯು ಅಲ್ಲಿ ಹಾವಿರುವದೆಂದೇ ಪಟ್ಟುಹಿಡಿದದ್ದರಿಂದ ಆವೂರಲ್ಲಿದ್ದ ಜೋಯಿಸರನ್ನು ಹೊತ್ತಗೆಕೇಳಲಾಗಿ ಅವರು ಕವಡೆಯ ಪ್ರಶ್ನೆಯನ್ನು ನೋಡಿ "ಅಯ್ಯ, ನಿಮ್ಮ ಮನೆಯಲ್ಲಿ ನಾಗರ ಕಾಟವಿದೆ, ಇದಕ್ಕೆ ಕೆಲವು ನಿಯಮಗಳನ್ನು ನಡೆಯಿಸಬೇಕು" ಎಂದು ಹೇಳಿದರು. ಅವರ ಅಪ್ಪಣೆಯಂತೆ ಕುರುಬನು ಒಂದು ನಾಗರಕಲ್ಲನ್ನು ಪ್ರತಿಷ್ಠೆಮಾಡಿ ದಿನದಿನವೂ ಮಿಂದು ಮಡಿಯುಟ್ಟು ಆ ಕಲ್ಲಿಗೆ ಹಾಲಿನ ಅಭಿಷೇಕ, ಪೂಜೆ - ಮುಂತಾದವುಗಳನ್ನು ಮಾಡುತ್ತಲೂ, ಬ್ರಾಹ್ಮಣರಿಗೆ ದಾನಧರ್ಮಗಳನ್ನು ಮಾಡಿಸುತ್ತಲೂ ಬಂದನು. ಇದರ ಜೊತೆಗೆ ಆ ಊರಿಗೆ ಬಂದಿದ್ದ ಒಬ್ಬ ಯೋಗೀಶ್ವರನ ಕಡೆಯಿಂದ ಪ್ರಾಣಾಯಾಮ, ಚಂಡೀಹೋಮ - ಮುಂತಾದದ್ದನ್ನೂ ಮಾಡಿಸಿದ್ದಾಯಿತು. ಆದರೂ ಮುದುಕಿಯ ಗೋಳುಮಟ್ಟಿಗೆ ತಪ್ಪಲೇ ಇಲ್ಲ. ಆಕೆಯು "ಅಯ್ಯೋ, ಇದೇನು ಕೇಡು ! ಈ ಮನೆಗೆ ಏನೋ ಗ್ರಹಚಾರವಿರಬೇಕು. ನಿತ್ಯವೂ ಒಂದೇ ಕಡೆಯಲ್ಲಿಯೇ ಹಾವು ಕಾಣಿಸುವದೆಂದರೆ ಎಂಥ ಮಾತು ! ಈ ಮನೆಯನ್ನೇ ನಾವು ಬಿಟ್ಟುಹೋಗಬೇಕು, ಇಲ್ಲದಿದ್ದರೆ ಏನಾದರೂ ತೊಂದರೆಯಾಗುವಷ್ಟೇ

ದಿಟ!'' ಎಂದು ಗೊಣಗುಟ್ಟುವದಕ್ಕೆ ಮೊದಲುಮಾಡಿದಳು.

ಹೀಗಿರುವಲ್ಲಿ ಒಂದು ದಿನ ಈ ಮಾತು ಒಬ್ಬ ನೆರೆಯವನ ಕಿವಿಗೆ ಬಿತ್ತು. ಅವನು ಸಂಗತಿಯನ್ನೆಲ್ಲ ವಿಚಾರಿಸಿ ''ಯಾವ ಸ್ಥಳದಲ್ಲಿ ಹಾವು ಕಾಣಿಸುತ್ತದೆ? ನೋಡೋಣ, ತೋರಿಸಿ'' ಎಂದು ಕೇಳಲು ಮುದುಕಿಯು ದೂರದಿಂದಲೇ ಆ ದಿಕ್ಕನ್ನು ಬೆರಳ ಸನ್ನೆಯಿಂದ ತೋರಿಸಿದಳು. ಆತನು ಕೂಡಲೆ ಅಲ್ಲಿಗೆ ಹೋಗಿ ನೋಡಲು ಆ ತುಂಡುಹಗ್ಗವು ಅಲ್ಲಿಯೇ ಬಿದ್ದಿರುವದು ಕಂಡುಬಂತು. ಕೂಡಲೆ ಇವರ ದಡ್ಡತನಕ್ಕೆ ತನ್ನಲ್ಲಿಯೇ ನಕ್ಕು ಆ ತುಂಡನ್ನು ಆಚೆಗೆ ದೂರ ಬಿಸಾಟು ''ಅಯ್ಯೋ ಹುಚ್ಚರೆ! ಒಂದು ಹಗ್ಗದ ತುಂಡಿಗೆ ಇಷ್ಟು ಗಲಭೆ ಎಬ್ಬಿಸಿದಿರಾ? ಇನ್ನು ಮೇಲೆ ನೋಡಿ, ಎಂದಿಗೂ ನಿಮ್ಮ ಮನೆಯಲ್ಲಿಯಾವ ನಾಗರಕಾಟವೂ ಇರುವದಿಲ್ಲ!'' ಎಂದನು. ಆ ದಿನ ಸಾಯಂಕಾಲವಾದರೂ ಮುದುಕಿಗೆ ಯಾವ ಹಾವೂ ಕಾಣಿಸಲಿಲ್ಲ. ಆಗಿಹೋದ ಅವಿವೇಕಕ್ಕೆ ಎಲ್ಲರೂ ಬಿದ್ದು ಬಿದ್ದು ನಕ್ಕು ಸುಮ್ಮನಾದರು.

ವೇದಾಂತಿಗಳು ನಮಗೆ ಹೇಳಿಕೊಡುವ ಮಾತೂ ಇಂಥದ್ದೇ. ನಮ್ಮಲ್ಲಿ ಅನೇಕರು ಆತ್ಮ, ಅನಾತ್ಮ - ಇವುಗಳ ಸ್ವರೂಪವನ್ನು ವಿಚಾರಮಾಡದೆ ಇಲ್ಲದ ಎಷ್ಟೋ ರಾಗದ್ವೇಷಗಳನ್ನು ಕಟ್ಟಿಕೊಂಡು ಒದ್ದಾಡುತ್ತಿರುವೆವು. ನಮಗೆ ಆಗಿರುವ ದುಃಖವೆಲ್ಲ ಅಜ್ಞಾನದಿಂದ ಎಂದರೆ ತಪ್ಪುತಿಳಿವಳಿಕೆಯಿಂದ ಆಗಿರುವದೆಂದು ತಿಳಿಯದೆ ಅದು ನಿಜವಾಗಿಯೂ ಇರುವದೆಂದು ಭಾವಿಸಿಕೊಂಡಿರುವೆವು. ನಿಜವಾಗಿಲ್ಲದೆ ಇದ್ದ ಹಾವನ್ನು ಕಳೆಯುವದಕ್ಕೆ ಕುರುಬನು ನೂರಾರು ಕರ್ಮಗಳನ್ನು ಮಾಡಿದಂತೆಯೇ ನಾವು ನಿಜವಾಗಿಲ್ಲದ ಈ ದುಃಖವನ್ನು ಹೋಗಲಾಡಿಸುವದಕ್ಕೆ ವರ್ಣ, ಆಶ್ರಮ - ಮುಂತಾದ ಸಂಕೇತಗಳಿಗೆ ಇಲ್ಲದ ಬೆಲೆಯನ್ನು ಕಟ್ಟಿ ಸ್ನಾನಸಂಧ್ಯಾಜಪತಪಗಳನ್ನು ಅನುಷ್ಠಾನಮಾಡಿ ಕರ್ಮೋಪಾಸನೆಗಳಿಂದಲೇ ಎಲ್ಲವೂ ಆಗಿಬಿಡುವದೆಂದು ನಂಬಿರುವೆವು. ಇವುಗಳಿಗೆ ಬೆಲೆಯೇ ಇಲ್ಲವೆಂಬುದು ಅಭಿಪ್ರಾಯವಲ್ಲ. ಕರ್ಮದಿಂದ ಮನಸ್ಸಿನ ಕೊಳೆಯು ಬಿಟ್ಟುಹೋಗುವದು. ಉಪಾಸನೆಯಿಂದ ಮನಸ್ಸು

ನೆಲೆಗೆ ನಿಲ್ಲುವದು. ಆದರೆ ಅಜ್ಞಾನದಿಂದ ಆಗಿರುವ ಕಟ್ಟನ್ನು ಜ್ಞಾನದಿಂದ ಬಿಚ್ಚಿಕೊಳ್ಳುವದಕ್ಕಾಗುತ್ತದೆಯೇ ಹೊರತು ಮತ್ತೇತರಿಂದಲೂ ಆಗಲಾರದೆಂಬುದು ಸಿದ್ಧಾಂಥವು. ನಮಗಿರುವ ಸುಖದುಃಖರೂಪವಾದ ಸಂಸಾರವು ಬ್ರಹ್ಮರೂಪವಾಗಿರುವ ನಮ್ಮ ಆತ್ಮನನ್ನು ಅರಿಯದಿರುವ ಅಜ್ಞಾನದಿಂದಾದದ್ದು ; ಆದ್ದರಿಂದ ಇದರ ಬಿಡುಗಡೆಯು ಆತ್ಮನನ್ನು ಅರಿಯುವದೆಂಬ ಜ್ಞಾನದಿಂದಲೇ ಆಗಬೇಕೆಂಬುದು ಯುಕ್ತವಾಗಿದೆ. ಆದ್ದರಿಂದಲೇ **ಮೋಕ್ಷಕ್ಕೆ ಜ್ಞಾನವೇ ಸಾಧನ**ವೆಂದು ವೇದಾಂತದಲ್ಲಿ ಸಾರಿಸಾರಿ ಹೇಳಿದೆ.

-------

# ೫. ಕಟ್ಟಿಗೆ ಮಾರುವವ

## ಬ್ರಹ್ಮ - ಈಶ್ವರ

**ಅದ್ವೈತದ್ವೈತವಾದೌ ದ್ವೌ ಸೂಕ್ಷ್ಮಸ್ಥೂಲದಶಾಂ ಗತೌ ।**
**ಅದ್ವೈತವಾದಾನ್ಮೋಕ್ಷಃ ಸ್ಯಾದಿತಿ ವೇದಾನ್ತಡಿಣ್ಡಿಮಃ ॥**[1]

ಒಂದೂರಿನಲ್ಲಿ ಒಬ್ಬ ಕಟ್ಟಿಗೆ ಮಾರುವವನಿದ್ದನು. ಅವನು ಬಲು ಬಡವನಾಗಿದ್ದದ್ದರಿಂದ ಅವನ ಜೀವನವು ಸಾಗುವದು ಬಹಳ ಕಷ್ಟವಾಗಿತ್ತು. ಒಂದುದಿನ ಅವನು ಒಬ್ಬ ಮಹಾತ್ಮರನ್ನು ಕಂಡು ''ಸ್ವಾಮಿ, ನನ್ನ ಬಡತನವು ಹಿಂಗುವದಕ್ಕೆ ಏನಾದರೂ ಒಂದು ಉಪಾಯವನ್ನು ಅಪ್ಪಣೆಕೊಡಿಸಬೇಕು'' ಎಂದು ಕೇಳಿಕೊಂಡನು. ಅವರು ''ಮುಂದು ಮುಂದಕ್ಕೆ ಹೋಗು'' ಎಂದು ಹೇಳಿದರು.

---

1. ಅದ್ವೈತ, ದ್ವೈತ - ಎಂದು ಎರಡು ವಾದಗಳುಂಟು. ಇವುಗಳಲ್ಲಿ ದ್ವೈತವು ಸ್ಥೂಲವು, ಅದ್ವೈತವು ಸೂಕ್ಷ್ಮವು. ಅದ್ವೈತವಾದದಿಂದಲೇ ಮೋಕ್ಷವಾಗುವದೆಂಬುದು ವೇದಾಂತದ ಡಂಗುರವು.

ಅವನು ಅದೇ ಮಹಾಪ್ರಸಾದವೆಂದು ತಿಳಿದುಕೊಂಡು ಆ ದಿನ ಎಂದಿಗಿಂತಲೂ ಸ್ವಲ್ಪ ಮುಂದಕ್ಕೆ ಹೋಗಲು ಒಂದು ದೊಡ್ಡ ಕಾಡು ಕಾಣಿಸಿತು. ಅಲ್ಲಿ ಉತ್ತಮವಾದ ಜಾತಿಯ ಮರಗಳನ್ನು ಕಡಿದು ಹೊರೆ ಕಟ್ಟಿ ತಂದು ಮಾರಲು ಆ ದಿನ ಅವನಿಗೆ ಎಂದಿಗಿಂತ ಎರಡರಷ್ಟು ಹಣವು ಸಿಕ್ಕಿತು. ಆದರೆ ಅವನು 'ಮುಂದುಮುಂದಕ್ಕೆ ಹೋಗು' ಎಂದು ಸ್ವಾಮಿಯವರ ಅಪ್ಪಣೆಯಾಗಿದೆ, ಅದರಂತೆಯೇ ಮಾಡಬೇಕು- ಎಂದು ಮಾರನೆಯ ದಿನ ಇನ್ನೂ ಮುಂದಕ್ಕೆ ಹೋದನು. ಅಲ್ಲಿ ಒಂದು ಚಂದನವನವು ಕಣ್ಣಿಗೆ ಬಿತ್ತು. ಚಂದನದ ಮರಗಳನ್ನು ಕಡಿದು ಅವನು ಸೌದೆಯನ್ನು ಮಾರುತ್ತಾ ಬರಲಾಗಿ ಅವನಿಗೆ ಹೇರಳವಾಗಿ ಧನಸಂಪಾದನೆಯಾಯಿತು.

ಆದರೆ 'ಮುಂದುಮುಂದಕ್ಕೆ' ಹೋಗಬೇಕೆಂದು ಮಹಾತ್ಮರು ಹೇಳಿದ್ದರೆಂಬುದರ ಮೇಲೆ ಇನ್ನೂ ಸ್ವಲ್ಪ ಮುಂದಕ್ಕೆ ಹೋಗಿ ನೋಡುವಲ್ಲಿ ಅವನಿಗೆ ಒಂದು ತಾಮ್ರದ ಗಣಿಯು ದೊರಕಿತು. ಇಷ್ಟು ಹೊತ್ತಿಗೆ ಇವನಲ್ಲಿ ತಕ್ಕಮಟ್ಟಿಗೆ ಹಣವು ಸೇರಿದ್ದರಿಂದ ಆ ಗಣಿಯಲ್ಲಿ ಕೆಲಸಮಾಡಿ ಸಾವಿರಗಟ್ಟಲೆಯಾಗಿ ಸಂಪಾದನೆಮಾಡತೊಡಗಿದನು. ಆದರೆ ಇನ್ನೂ 'ಮುಂದುಮುಂದಕ್ಕೆ' ಹೋಗುತ್ತಾ ಇರುವಲ್ಲಿ ಇವನಿಗೆ ಕ್ರಮಕ್ರಮವಾಗಿ ಬೆಳ್ಳಿ, ಬಂಗಾರ - ಇವುಗಳ ಗಣಿಗಳೂ ಸಿಕ್ಕಿದವು. ಕೊನೆಗೆ ಒಂದು ವಜ್ರದ ಗಣಿಯೇ ಸಿಕ್ಕಿತು. ಇವನು ಆ ಮಹಾತ್ಮರ ಸದುಪದೇಶವನ್ನು ಸಾರ್ಥಕ ಮಾಡಿಕೊಂಡು ಆ ವಜ್ರದ ಗಣಿಯನ್ನು ಉಪಯೋಗಿಸಿಕೊಂಡು ಕೋಟ್ಯಧೀಶ್ವರನಾಗಿ ಬಾಳುತ್ತಿದ್ದನು.

ಶಾಸ್ತ್ರದಲ್ಲಿ ಈ ಲೋಕಕ್ಕೆಲ್ಲ ದೊಡ್ಡದೊಂದು ಕಾರಣವಿರುವದೆಂದು ಉಪದೇಶಿಸಿರುತ್ತದೆ. ಈ ಕಾರಣವನ್ನು ಅನೇಕರು ದೇವತೆಗಳೆಂದು ಭಾವಿಸುವರು : ಮತ್ತೆ ಕೆಲವರು ದೇವತೆಗಳಿಗೆಲ್ಲ ಒಡೆಯನಾದ **ಈಶ್ವರ**ನೊಬ್ಬನಿರುವನೆಂದು ಹೇಳುವರು. ಈಶ್ವರನು ಭಯಂಕರನೆಂದು ಕೆಲವರು ಹೇಳುವರು. ಇನ್ನು ಕೆಲವರು ಆತನು ಪ್ರೇಮಮೂರ್ತಿಯೆನ್ನುವರು. ಮತ್ತೂ ಕೆಲವರು ''ಈಶ್ವರನಲ್ಲಿ ಒಳ್ಳೆಯ ಗುಣಗಳೂ ಕೆಟ್ಟ ಗುಣಗಳೂ

ಎರಡೂ ಇರುತ್ತವೆ ; ಆತನು ಕೆಟ್ಟವರಿಗೆ ಕೆಟ್ಟವನೂ ಒಳ್ಳೆಯವರಿಗೆ ಒಳ್ಳೆಯವನೂ ಆಗಿರುವನು'' ಎಂದು ಹೇಳುತ್ತಾರೆ. ಇವೆಲ್ಲ ಉತ್ತಮವಾದ ಕಲ್ಪನೆಗಳೇ ಸರಿ. ಕಟ್ಟಿಗೆಯವನು ಸಾಧಾರಣವಾದ ಕಟ್ಟಿಗೆಯಿಂದ ಹಿಡಿದು ಚಂದನವನ, ತಾಮ್ರದ ಗಣಿ, ಬೆಳ್ಳಿಯ ಗಣಿ, ಬಂಗಾರದ ಗಣಿ-ಇವುಗಳನ್ನು ಕ್ರಮಕ್ರಮವಾಗಿ ಪಡೆದಂತೆ ಈ ಮತಗಳು ಒಂದಕ್ಕಿಂತ ಒಂದು ಹೆಚ್ಚಿನ ಕಲ್ಪನೆಯನ್ನೇ ತೋರಿಸುತ್ತಿರುವೆಂಬುದು ನಿಜ. ಆದರೆ ವೇದಾಂತದಲ್ಲಿ ಹೇಳಿರುವ ಬ್ರಹ್ಮವಸ್ತುವೆಂಬುದು ಕಥೆಯಲ್ಲಿನ ವಜ್ರದ ಗಣಿಯಂತಿರುವದು. ಬ್ರಹ್ಮವು ಸಚ್ಚಿದಾನಂದರೂಪನಾದ ನಮ್ಮೆಲ್ಲರ ಆತ್ಮನೇ ಎಂಬುದು ಮಿಕ್ಕ ಎಲ್ಲಾ ಈಶ್ವರಕಲ್ಪನೆಗಳಿಗಿಂತಲೂ ಶ್ರೇಷ್ಠವಾಗಿರುವದು. ಮಿಕ್ಕ ವಾದಗಳೆಲ್ಲ ಸ್ಥೂಲದೃಷ್ಟಿಗೆ ಗೋಚರವಾಗುವವು, ಸಚ್ಚಿದಾನಂದ ರೂಪವಾದ ಬ್ರಹ್ಮವನ್ನು ತಿಳಿಸುವ ವೇದಾಂತವಾದವು, ಮಟ್ಟಿಗೆ ಸೂಕ್ಷ್ಮದೃಷ್ಟಿಯುಳ್ಳವರಿಗೇ ದಕ್ಕುವದು.

------

# ೬. ವೈಕುಂಠದವರೂ ಕೈಲಾಸದವರೂ

## ಜ್ಞಾನಫಲವಾದ ಮೋಕ್ಷ - ಸ್ವರ್ಗಾದಿಫಲಗಳು

**ಪರೋಕ್ಷಾಸತ್ಫಲಂ ಕರ್ಮ ಜ್ಞಾನಂ ಪ್ರತ್ಯಕ್ಷಸತ್ಫಲಮ್ ।**
**ಜ್ಞಾನಮೇವಾಭ್ಯಸೇತ್ತಸ್ಮಾದಿತಿ ವೇದಾನ್ತಡಿಣ್ಡಿಮಃ ॥**[1]

ಹಿಂದೆ ನಗರವೆಂಬ ರಾಜ್ಯದಲ್ಲಿ ಶಿವಪ್ಪನಾಯಕನೆಂಬ ಒಬ್ಬ ಅರಸು ಆಳುತ್ತಿದ್ದನು. ಆತನ ರಾಜ್ಯದಲ್ಲಿ ವೀರಶೈವರಿಗೆ ಹೆಚ್ಚಿನ ಆಶ್ರಯವಿರುತ್ತಿದ್ದ

---

1. ಕರ್ಮಕ್ಕೆ ಬರುವ ಫಲವು ಎಲ್ಲಿಯೋ ಆಗುವದು, ಮಿಥ್ಯಾರೂಪವಾಗಿರುವದು ; ಜ್ಞಾನದ ಫಲವಾದ ಮೋಕ್ಷವು ಎದುರಿಗೇ ಆಗುವದು, ಸತ್ಯರೂಪವಾಗಿರುವದು, ಆದ್ದರಿಂದ ಜ್ಞಾನವನ್ನೇ ಅಭ್ಯಾಸಮಾಡಬೇಕೆಂದು ವೇದಾಂತದ ಡಂಗುರವು.

ದ್ದರಿಂದ ಕೆಲವು ಜನ ಮೂಢರು ವೈಷ್ಣವಮತನಿಂದೆಯನ್ನು ಮಾಡುವದು ಅರಸನ ಮೆಚ್ಚುಗೆಗೆ ಕಾರಣವೆಂದು ಭಾವಿಸಿದ್ದರು.

ಒಂದುದಿನ ಒಬ್ಬ ಜಂಗಮಯ್ಯನು ಸಭೆಯಲ್ಲಿ ದೊರೆಯನ್ನು ಏಕವಚನದಿಂದಲೇ ಸಂಬೋಧಿಸುವದಕ್ಕೆ ಪ್ರಾರಂಭಿಸಿ ''ಶಿವಗಾ, ಕೈಲಾಸದ ವರ್ಣನೆಯನ್ನು ಹೇಳುತ್ತೇನೆ, ಕೇಳು : ಅಲ್ಲಿ ಶ್ರೀಮಹಾದೇವನ ಪಾದಗಳನ್ನು ವಿಷ್ಣುವೇ ಒತ್ತುತ್ತಿರುವನು ; ಲಕ್ಷ್ಮಿಯೇ ಆತನಿಗೆ ಬೀಸಣಿಗೆ ಹಾಕುತ್ತಿರುವಳು ; ಬ್ರಹ್ಮಾದಿಗಳು 'ನಮಗೇನಾದರೂ ಊಳಿಗವು ಸಿಕ್ಕೀತೆ?' ಎಂದು ಕಾದುಕೊಂಡಿರುವರು. ಸಣ್ಣಪುಟ್ಟ ದೇವತೆಗಳ ಪಾಡಂತೂ ಹೇಳ ತೀರದು ; ಅವರೆಲ್ಲ ಅಲ್ಲಿ ಅಡಿಯಾಳುಗಳಾಗಿ ಮಹಾದ್ವಾರದ ಹೊರಗೆ ಇರುವರು ! ಇನ್ನು ವಿಷ್ಣುವನ್ನು ನಂಬಿಕೊಂಡಿರುವ ಹಾರುವರಿಗೆ ಆ ಲೋಕಕ್ಕೆ ಪ್ರವೇಶವೇ ಇಲ್ಲವೆಂಬುದನ್ನು ಮತ್ತೆ ಹೇಳಬೇಕೆ ?'' ಎಂದು ವೀರಾವೇಷದಿಂದ ಹೇಳುತ್ತಿದ್ದನು. ದೊರೆಯು ನಿಜವಾಗಿ ಶಿವಭಕ್ತನಾದರೂ ದುರಭಿಮಾನಿಯಲ್ಲವಾದ್ದರಿಂದ ಇದನ್ನು ಕೇಳುವದಕ್ಕೂ ಮನಸ್ಸೊಪ್ಪದೆ, ಅಯ್ಯನು ಶಿವಭಕ್ತನೆಂಬುದರಮೇಲೆ ಇಂಥ ಮಾತನಾಡಬೇಡವೆಂದು ಹೇಳುವದಕ್ಕೂ ನಾಲಗೆ ಬರದೆ ಚಿಂತಿಸುತ್ತಿದ್ದನು.

ಆ ಸಮಯಕ್ಕೆ ವೀರವೈಷ್ಣವನಾದ ಬ್ರಾಹ್ಮಣನೊಬ್ಬನು ಅಲ್ಲಿಗೆ ಬಂದು ''ಮಹಾಪ್ರಭೋ, ನನಗೆ ಪುರಾಣಗಳಲ್ಲಿ ಮಹಾಪರಿಶ್ರಮವಿರುವದು. ಮುಖ್ಯವಾಗಿ ವಿಷ್ಣುಪುರಾಣಗಳನ್ನು ಚೆನ್ನಾಗಿ ಓದಿದೇನೆ. ಅವುಗಳಲ್ಲಿ ವೈಕುಂಠವರ್ಣನೆಯನ್ನು ಮಾಡಿರುವ ಬಗೆಯನ್ನು ಸ್ವಲ್ಪಮಟ್ಟಿಗೆ ವಿವರಿಸುತ್ತೇನೆ. ಅದನ್ನು ಕೇಳುವದರಿಂದ ವಿಷ್ಣುಭಕ್ತರಿಗಾಗುವ ಉತ್ತಮ ಗತಿಯು ಪ್ರಭುಚಿತ್ತಕ್ಕೆ ವೇದ್ಯವಾಗುವದು. ಆ ಮಹಾಲೋಕದಲ್ಲಿ ಶ್ರೀಮಹಾವಿಷ್ಣುವು ಉಚ್ಚಾಸನದಲ್ಲಿ ಕುಳಿತರುವನು. ರುದ್ರದೇವರೇ ಕಾಲೊತ್ತುತ್ತಿರುವರು ; ಪಾರ್ವತಿಯೇ ಬೀಸಣಿಗೆ ಹಾಕುತ್ತಿರುವಳು'' ಎಂದುಮೊದಲಾಗಿ ಹೇಳುತ್ತಿರುವಷ್ಟರಲ್ಲಿ ಜಂಗಮಯ್ಯನು ಕಣ್ಣುಗಳನ್ನು

ಕೆಂಪಗೆ ಮಾಡಿಕೊಂಡು 'ಏನೆಲೇ ಹಾರುವ ! ಎಂದಾದರೂ ಶಾಸ್ತ್ರವನ್ನು ಓದಿದ್ದೀಯೋ ಇಲ್ಲವೊ ? ಶ್ರೀ ಪರಮೇಶ್ವರನಿಗೆ ವಿಷ್ಣುವು ಭಕ್ತನಾಗಿರುವನೆಂಬ ಉತ್ತಮತತ್ತ್ವವನ್ನರಿಯದೆ ತಲಹರಟೆ ಹರಟುವದಕ್ಕೆ ಪ್ರಾರಂಭಿಸಿದೆಯೊ ? ಶಿವಗಾ, ಶಿವನಿಂದೆಯನ್ನು ಕೇಳಬಾರದು. ಇವನಿಗೆ ತಕ್ಕ ಶಿಕ್ಷೆಯನ್ನು ಈಗಲೆ ಮಾಡಿಸಬೇಕು !' ಎಂದನು.

ಆಗ ಶಿವಪ್ಪನಾಯಕನು 'ಬುದ್ಧಿ, ಇದೆಲ್ಲ ವೈಕುಂಠದವರೂ ಕೈಲಾಸದವರೂ ನಿರ್ಣಯಿಸುವ ವಿಷಯ. ಈ ದೀನನು ವೈಕುಂಠವನ್ನೂ ನೋಡಿಲ್ಲ ಕೈಲಾಸವನ್ನೂ ನೋಡಿಲ್ಲ : ಹೀಗಿರುವಲ್ಲಿ ಹಾರುವಯ್ಯನು ಹೇಳುವದನ್ನು ತಪ್ಪೆಂದು ಹೇಗೆತಾನೆ ನಿರ್ಣಯಿಸಿಯಾನು ?'ಎಂದು ವಿನಯದಿಂದ ಉತ್ತರಕೊಟ್ಟನಂತೆ.

ವೇದಾಂತಕ್ಕೂ ಉಳಿದ ಮತಗಳಿಗೂ ಆಗುವ ಫಲದ ವಿಷಯದಲ್ಲಿ ಒಂದು ಮುಖ್ಯ ಹೆಚ್ಚುಕಡಿಮೆಯಿರುವದು. ಮಿಕ್ಕ ಎಲ್ಲಾ ದರ್ಶನಕಾರರೂ ತಮ್ಮ ಮತವನ್ನು ನಂಬಿ ನಡೆಯುವವರಿಗೆ ಸತ್ತಮೇಲೆ ಇಂಥಿಂಥ ಫಲವು ಸಿಕ್ಕುವದು - ಎಂದು ಬಣ್ಣಿಸಿ ನುಡಿಯುತ್ತಿರುವರು. ಒಂದು ಮತದವರು ಮತ್ತೊಂದು ಮತದಲ್ಲಿ ಹೇಳಿದ ಫಲವನ್ನು ಅಲ್ಲಗಳೆದು ತಮ್ಮದೇ ಸರಿಯಾದ ಮತವೆಂದು ಹೇಳುತ್ತಿರುವರು. ಇವರೆಲ್ಲರೂ ಸತ್ತಮೇಲೆ ಆಗುವ ಫಲವನ್ನೇ ಹೇಳುತ್ತಿರುವದರಿಂದ ಯಾವ ಮತವೂ ಸರಿಯೆಂಬುದನ್ನು ಈಗಲೆ ನಿರ್ಣಯಮಾಡುವದಕ್ಕೆ ಆಗುವಂತಿಲ್ಲ. ವೇದಾಂತದಲ್ಲಿ ಮಟ್ಟಿಗೆ ಜ್ಞಾನವಾದಕೂಡಲೆ, ಈ ಲೋಕದಲ್ಲಿಯೇ, ಮೋಕ್ಷವು ದೊರೆಯುವದೆಂಬ ಪ್ರತ್ಯಕ್ಷಫಲವನ್ನು ಹೇಳಿರುತ್ತದೆ. ಊಟಮಾಡಿದರೆ ತೃಪ್ತಿಯು ಹೇಗೆ ಎಲ್ಲರಿಗೂ ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವದೋ ಹಾಗೆ ಜ್ಞಾನದಿಂದ ಆಗುವ ಮೋಕ್ಷವೂ ನಿಶ್ಚಿತವಾಗಿ ಅನುಭವಕ್ಕೆ ಬರುವದು. ಇಂಥ ಅನುಭವಕ್ಕೆ **ಅಪರೋಕ್ಷಾನುಭವ**ವೆಂದು ಹೆಸರು.

------

ಒಂದೂರಿನಲ್ಲಿ ಒಬ್ಬ ಹುಡುಗಿ ಇದ್ದಳು. ಆಕೆಗೆ ಒಂದು ಮುತ್ತಿನ ಕಂಠಿಯನ್ನು ಅವರ ತಂದೆಯು ಕೊಂಡುಕೊಡಲು ಅದನ್ನು ಬಹು ಸಂತೋಷದಿಂದ ಕೊರಳಲ್ಲಿ ಹಾಕಿಕೊಂಡಳು. ಅವಳು ಯಾವಾಗ ಮನೆಯಿಂದ ಹೊರಟರೂ ಅದನ್ನು ಹಾಕಿಕೊಳ್ಳದೆ ಹೊರಗೆ ಕಾಲಿಡುತ್ತಿರಲಿಲ್ಲ. ಬರುಬರುತ್ತ ಆಕೆಗೆ ಅದರ ಮೇಲೆ ಮಿತಿಮೀರಿದ ಮೋಹವು ಹುಟ್ಟಿತು. ''ಇದನ್ನು ಎಲ್ಲಿ ಯಾರು ಕದ್ದುಕೊಳ್ಳುವರೋ, ಎಲ್ಲಿ ಕೆಳಗೆ ಬಿದ್ದು ಇದು ಒಡೆದುಹೋಗುವದೊ !'' ಎಂದು ಇಲ್ಲದ ಭೀತಿಯನ್ನು ಮೈಮೇಲೆ ಹಾಕಿಕೊಂಡು ಆಗಾಗ್ಗೆ ಚಿಂತಿಸುತ್ತಿದ್ದಳು.

ಹೀಗಿರುವಲ್ಲಿ ಒಂದು ದಿನ ತಮ್ಮ ಚಿಕ್ಕಮ್ಮನ ಮನೆಗೆ ಆರತಿಯ ಮಹೋತ್ಸವಕ್ಕೆ ಕರೆಯಲಾಗಿ ಈ ಹುಡುಗಿಯು ಬಹಳ ಸಡಗರದಿಂದ ಹೊಸ ಸೀರೆಯನ್ನುಟ್ಟು ಬೇಗ ತನ್ನ ಕಂಠಿಯನ್ನು ಹಾಕಿಕೊಂಡು ಹೋಗೋಣವೆಂದು ಪೆಟ್ಟಿಗೆಯನ್ನು ತೆಗೆದು ನೋಡಲಾಗಿ ಅದರಲ್ಲಿರಲಿಲ್ಲ. ಗಾಬರಿಯಿಂದ ದೊಡ್ಡ ಪೆಠಾರಿಯನ್ನು ತೆಗೆದಳು ; ಅಲ್ಲಿಯೂ ಇರಲಿಲ್ಲ. ಕೋಣೆಯಲ್ಲೆಲ್ಲ ನೋಡಿದಳು, ಕಾಣಲಿಲ್ಲ. 'ಹಾಗಾದರೆ ಹಾಸಿಗೆಯಲ್ಲಿ ಬಿದ್ದಿದ್ದೀತೆ ?' ಎಂದು ಹಾಸಿಗೆಯನ್ನು ಬಿಚ್ಚಿದಳು, ಅದರಲ್ಲಿಯೂ ಇರಲಿಲ್ಲ. ಅವಳಿಗೆ ದಿಕ್ಕುತೋಚದಂತಾಯಿತು. 'ಆ ನನ್ನ ಮನೋಹರವಾದ ಕಂಠಿಯನ್ನು ಯಾರೊಯ್ದಿದ್ದಾರು ? ಬರಿಯ ಕೊರಳಲ್ಲಿ ಹೇಗೆ ಹೋಗುವದು ? ಛೇ ! ನನಗೆ ಆರತಿಯೂ ಬೇಡ, ಏನೂ ಬೇಡ'' ಎಂದು ಉಸ್ಸೆಂದು ಕಣ್ಣೀರಿಡುತ್ತ ಕುಳಿತುಕೊಂಡಳು.

ಅಷ್ಟುಹೊತ್ತಿಗೆ ಅವಳ ತಾಯಿ ''ಮಗು, ಏಕಮ್ಮ ಹೊರಡಲಿಲ್ಲ ? ಆರತಿಗೆ ಹೊತ್ತಾಯಿತು, ಏಳು'' ಎಂದು ಕೋಣೆಯೊಳಕ್ಕೆ ಬಂದಳು. ತನ್ನ ಮುದ್ದುಮಗಳು ಅಳುತ್ತಿರುವದನ್ನು ಕಂಡು ಸಹಿಸಲಾರದೆ ಆ ತಾಯಿಯು ಕೂಡಲೆ ಸಂಗತಿಯೇನೆಂದು ಕೇಳಿದಳು. ಹುಡುಗಿಯು ಕಂಠಿ ಹೋದ ಸಮಾಚಾರವನ್ನು ಎತ್ತುತ್ತಲೂ, ''ಛೀ ಹುಚ್ಚಿ ! ಕೊರಳಲ್ಲಿಯೇ ಇಟ್ಟು

ಕೊಂಡು ಮನೆಯೆಲ್ಲ ಹುಡುಕಿದೆಯ ? ಏಳು, ಆರತಿಗೆ ಹೋಗೋಣ'' ಎಂದು ಸಮಾಧಾನಪಡಿಸಿ ಕರೆದುಕೊಂಡುಹೋದಳು.

ನಿಜವಾಗಿ ಹುಡುಗಿಯು ತನ್ನ ಕೊರಳಲ್ಲಿಯೇ ಇದ್ದ ಕಂಠಿಗಾಗಿಯೇ ಇಷ್ಟು ಗಲಭೆಮಾಡಿಕೊಂಡು ದುಃಖಪಟ್ಟಿದ್ದಳು !

ಬ್ರಹ್ಮಜ್ಞಾನದ ವಿಷಯವೂ ಹೀಗೆಯೇ. ಬ್ರಹ್ಮವನ್ನು ಕಾಣುವದಕ್ಕೆ ಗುಡ್ಡಬೆಟ್ಟಗಳನ್ನು ತಡಕಾಡಬೇಕಾದದ್ದಿಲ್ಲ ; ಗುಡಿಗೋಪುರಗಳನ್ನು ಸೇರಿ ಹರಕೆಗಳನ್ನು ಒಪ್ಪಿಸಬೇಕಾದದ್ದಿಲ್ಲ ; ದೇಹವನ್ನು ಉಪವಾಸವನವಾಸಗಳಿಂದ ದಂಡಿಸಬೇಕಾದದ್ದಿಲ್ಲ ; ಸ್ನಾನಸಂಧ್ಯಾಜಪತಪೋನುಷ್ಠಾನಗಳನ್ನೇ ಆಗಲಿ, ಪುಷ್ಪೋದಕಾಂಜಲಿಸ್ತುತಿನಮಸ್ಕಾರಬಲಿಹರಣಧ್ಯಾನ - ಮುಂತಾದವನ್ನೇ ಆಗಲಿ ಮಾಡಬೇಕಾದದ್ದಿಲ್ಲ. ಈ ಸಾಧನಗಳಿಂದ ಬೇರೆಬೇರೆ ಫಲಗಳಾದಾವು ; ಆದರೆ ಬ್ರಹ್ಮವನ್ನು ತಿಳಿಯುವದಕ್ಕೆ ಇವುಗಳಲ್ಲಿ ಯಾವದೂ ನೇರಾಗಿ ಅವಶ್ಯವಿಲ್ಲ. ಮುತ್ತಿನ ಕಂಠಿಯನ್ನು ಕಾಣುವದಕ್ಕೆ ಪೆಟ್ಟಿಗೆಯನ್ನು ತೆಗೆಯುವದು, ಹಾಸಿಗೆಯನ್ನು ಬಿಚ್ಚುವದು, ಮನೆಯಲ್ಲೆಲ್ಲಾ ಹುಡುಕುವದು - ಇವೆಲ್ಲ ಪ್ರಯೋಜನಕ್ಕೆ ಬಂದವೆ ? ಇಲ್ಲ. 'ಅದು ಕೊರಳಲ್ಲಿಯೇ ಇದೆ' ಎಂಬ **ತಿಳಿವಳಿಕೆ**ಯೊಂದೇ ಸಾಕಾಯಿತು. ಅದರಂತೆ ಬ್ರಹ್ಮವು ನಮ್ಮ ಆತ್ಮನೇ ಆಗಿರುವದರಿಂದ ಅದನ್ನು ನಮ್ಮ ಸ್ವರೂಪವೆಂತ ತಿಳಿದುಕೊಳ್ಳುವದೊಂದು ಹೊರತು ಮತ್ತೆ ಯಾವ ಉಪಾಯವೂ ಅದಕ್ಕೆ ನೇರಾದ ಸಾಧನವಾಗಲಾರದು.

ಹುಡುಗಿಯು ಕೊರಳಲ್ಲಿದ್ದ ಮುತ್ತಿನ ಕಂಠಿಯನ್ನು ತಾಯಿಯಿಂದ ಅರಿತುಕೊಂಡಂತೆ ನಮ್ಮ ನಿಜವಾದ ಸ್ವರೂಪವನ್ನು ಗುರುಶಾಸ್ತ್ರಗಳ ಅನುಗ್ರಹದಿಂದ ಅರಿಯಬೇಕೆಂದು ವೇದಾಂತಿಗಳು ಹೇಳುತ್ತಾರೆ. ಇತರ ಮತದವರು ಹೇಳುವ ಈಶ್ವರನನ್ನು ಅರಿಯುವದು ಬಹುಕಷ್ಟಸಾಧ್ಯವಾದದ್ದು, ಮತ್ತು ಆ ಅರಿವಿನಿಂದ ಪ್ರಯೋಜನವೂ ಕಡಿಮೆ. ಆದರೆ ಬ್ರಹ್ಮವನ್ನು ಅರಿಯುವದು ಬಹು ಸುಲಭ ; ಏಕೆಂದರೆ **ಬ್ರಹ್ಮವು ನಮ್ಮ**

**ಆತ್ಮನೇ** ಆಗಿರುವದು. ಈ ಅರಿವಿನಿಂದ ಹೆಚ್ಚಿನ ಪ್ರಯೋಜನವೂ ಉಂಟು; ಏಕೆಂದರೆ ಹಾಗೆಂದು ಅರಿಯದ್ದರಿಂದ ಆಗಿರುವ ಅನರ್ಥಗಳೆಲ್ಲವೂ ಈ ಜ್ಞಾನದಿಂದ ಒಮ್ಮೆಗೇ ಹೋಗಿಬಿಡುವವು.

-------

# ೧೫. ತ್ರಿಪುರಾಸುರಸಂಹಾರ

## ತುರೀಯ - ಅವಸ್ಥಾತ್ರಯ

**ಅವಸ್ಥಾತ್ರಿತಯಂ ಯಸ್ಯ ಕ್ರೀಡಾಭೂಮಿತಯಾ ಸ್ಥಿತಮ್ ।**
**ತದೇವ ಬ್ರಹ್ಮ ಜಾನೀಯಾದಿತಿ ವೇದಾನ್ತಡಿಣ್ಡಿಮಃ ॥**[1]

ಪೂರ್ವದಲ್ಲಿ ತಾರಕಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ- ಎಂಬ ಮೂರು ಜನ ಅಸುರರು ಈಶ್ವರನ ಅನುಗ್ರಹದಿಂದ ಒಂದು ಅಮೋಘವಾದ ವರವನ್ನು ಪಡೆದುಕೊಂಡರು, ಇವರು ಕ್ರಮವಾಗಿ ಚಿನ್ನ, ಬೆಳ್ಳಿ, ಕಬ್ಬಿಣ - ಇವುಗಳಿಂದಾದ ಮೂರು ಪುರಗಳನ್ನು ಮಾಡಿಕೊಂಡು ಇವು ದಿವ್ಯಸಹಸ್ರವರ್ಷಗಳಿಗೆ ಒಂದು ಸಲ ಒಂದು ಮುಹೂರ್ತಕಾಲ ಒಟ್ಟಿಗೆ ಸೇರಿರಬೇಕೆಂದೂ ಆ ಕಾಲದಲ್ಲಿ ಒಂದೇ ಬಾಣದಿಂದ ಅವನ್ನು ಹೊಡೆಯುವ ವೀರನಿಂದಮಟ್ಟಿಗೆ ಅವುಗಳ ನಾಶವಾಗಬೇಕೆಂದೂ ಈಶ್ವರನಿಂದ ವರವನ್ನು ಪಡೆದುಕೊಂಡರು. ಆ ವರದ ಬಲದಿಂದ ಮತ್ತರಾದ ಈ ತ್ರಿಪುರಾಸುರರು ಲೋಕವನ್ನೆಲ್ಲ ಬಾಧಿಸುತ್ತಾ ಬಂದರು. ಇವರ ಕಾಟವನ್ನು ತಡೆಯುವದು ಯಾರಿಂದಲೂ ಆಗದೆ ಹೋಯಿತು.

ಕೊನೆಗೆ ದೇವತೆಗಳೆಲ್ಲ ಸೇರಿ ಈಶ್ವರನಲ್ಲಿ ಮೊರೆಯಿಟ್ಟರು, ಆಗ ಆ ಮಹಾದೇವನು ದಯೆಯಿಂದ ಭೂಮಿಯನ್ನೇ ರಥವನ್ನಾಗಿಯೂ ಬ್ರಹ್ಮ

1. ಯಾವದಕ್ಕೆ ಮೂರವಸ್ಥೆಗಳೂ ಆಟದ ಸ್ಥಳವಾಗಿರುವವೋ, ಅದೇ ಬ್ರಹ್ಮವೆಂದು ತಿಳಿಯಬೇಕೆಂದು ವೇದಾಂತದ ಡಂಗುರವು.

ನನ್ನು ಸಾರಥಿಯನ್ನಾಗಿಯೂ ವೇದಗಳನ್ನು ಗಾಲಿಗಳನ್ನಾಗಿಯೂ ಮೇರು ಪರ್ವತವನ್ನು ಬಿಲ್ಲನ್ನಾಗಿಯೂ ಆದಿಶೇಷನನ್ನು ಬಿಲ್ಲಿನ ಹುರಿಯನ್ನಾಗಿಯೂ ವಿಷ್ಣುವನ್ನು ಬಾಣವನ್ನಾಗಿಯೂ ಮಾಡಿಕೊಂಡು ಅವರೊಡನೆ ದಿವ್ಯಸಹಸ್ರವರ್ಷಗಳ ತನಕ ಯುದ್ಧಮಾಡುತ್ತಿದ್ದು ಕೊನೆಗೆ ಅವು ಸೇರುವ ಕಾಲವು ಬಂದೊಡನೆಯೇ ಬಾಣವನ್ನು ಬಿಟ್ಟು ಆ ತ್ರಿಪುರಗಳನ್ನು ಸುಟ್ಟುರುಹಿದನು.

ಈ ಕಥೆಯಲ್ಲಿ ಅಸುರರು ಈಶ್ವರನ ಅನುಗ್ರಹದಿಂದ ಮೂರು ಪುರಗಳನ್ನು ಏರ್ಪಡಿಸಿಕೊಂಡಂತೆಯೇ ಜೀವರೂ ಜಾಗ್ರತ್ತು (ಎಚ್ಚರ), ಸ್ವಪ್ನ (ಕನಸು), ಸುಷುಪ್ತಿ (ಗಾಢನಿದ್ರೆ) - ಎಂಬ ಮೂರವಸ್ಥೆಗಳನ್ನು ಮಾಡಿಕೊಂಡಿರುವರು. ಜಾಗ್ರದವಸ್ಥೆಯೇ ಚಿನ್ನದ ಪುರವು ; ಏಕೆಂದರೆ ಇದು ಚಿನ್ನದಂತೆ ಥಳಗುಟ್ಟುವ ಶಬ್ದ, ಸ್ಪರ್ಶ, ರೂಪ, ರಸ, ಗಂಧ - ಎಂಬ ವಿಷಯಗಳಿಂದ ತುಂಬಿರುವದು. ಚಿನ್ನದ ಪುರವನ್ನು ಆಶ್ರಯಿಸಿದ್ದ ತಾರಕಾಕ್ಷನಂತೆ ಜಾಗ್ರತ್ತಿನ ಅಭಿಮಾನಿಯಾಗಿರುವ ಜೀವನ ಸ್ವರೂಪಕ್ಕೆ **ವಿಶ್ವ**ನೆಂದು ಹೆಸರು. ಸ್ವಪ್ನಾವಸ್ಥೆಯೇ ಬೆಳ್ಳಿಯ ಪುರವು. ಇದು ಬೆಳ್ಳಿಯಂತೆ ಸ್ವಚ್ಛವಾದ ಮನಸ್ಸಿನಿಂದ ಆಗಿರುವದು. ಈ ಅವಸ್ಥೆಯು ತನ್ನದೆಂದು ಅಭಿಮಾನಪಡುವ ಜೀವನ ಸ್ವರೂಪಕ್ಕೆ **ತೈಜಸ**ನೆಂದು ಹೆಸರು. ಸುಷುಪ್ತಿಯೆಂಬುದು ಕಬ್ಬಿಣದ ಪುರದಂತಿರುವದು. ಏಕೆಂದರೆ ಸಾಮಾನ್ಯವಾಗಿ ಕಬ್ಬಿಣದಲ್ಲಿ ಪ್ರಕಾಶವಿರುವದಿಲ್ಲ. ಇದರಂತೆಯೇ ಗಾಢನಿದ್ರೆಯಲ್ಲಿಯೂ ಯಾವ ವಿಷಯವೂ ತೋರದೆ ಮರವೆಯು ಮುಚ್ಚಿಕೊಂಡಂತಿರುವದು. ಸುಷುಪ್ತಿಯು ತನಗುಂಟೆಂದರಿಯುವ ಜೀವನ ಸ್ವರೂಪಕ್ಕೆ **ಪ್ರಾಜ್ಞ**ನೆಂದು ಹೆಸರು. ಕಥೆಯಲ್ಲಿ ಅಸುರರು ತಮ್ಮ ಸುಖಕ್ಕಾಗಿ ಜನರನ್ನೆಲ್ಲ ಕಾಡುತ್ತಿದ್ದಂತೆ ಈ ಅವಸ್ಥೆಗಳಲ್ಲಿ ಅಭಿಮಾನವಿರುವವರು ಸ್ವಾರ್ಥಪರರಾಗಿರುವರು.

ನಿಜವಾದ ಆತ್ಮಸ್ವರೂಪವು ಈ ಮೂರಕ್ಕೂ ಮೀರಿರುವದರಿಂದ **ತುರೀಯ**ನೆನಿಸಿರುತ್ತದೆ. ಈ ಮೂರವಸ್ಥೆಗಳನ್ನೂ ದಾಟುವದಕ್ಕೆ ಬೇಕಾದ ಸಹಾಯಸಂಪತ್ತುಗಳು ಯಾವವೆಂದರೆ : 'ಭೂಮಿಯೇ ರಥವಾಗಬೇಕು'

# ೭. ಭರ್ಜುವಿನ ಪಿಶಾಚಿ

## ಶ್ರದ್ಧೆ - ಮೂಢವಿಶ್ವಾಸ

**ಶ್ರೋತವ್ಯಾಶ್ರಾವ್ಯರೂಪೌ ದ್ವೌ ಪದಾರ್ಥೌ ಸುಖದುಃಖದೌ ।**
**ಶ್ರೋತವ್ಯಂ ಬ್ರಹ್ಮ ನೈವಾನ್ಯದಿತಿ ವೇದಾನ್ತಡಿಣ್ಡಿಮಃ ॥**[1]

ಒಬ್ಬಾನೊಬ್ಬ ರಾಜನಲ್ಲಿ ಭರ್ಜುವೆಂಬ ವಿದ್ವಾಂಸನಿದ್ದನು. ಇವನ ಪಾಂಡಿತ್ಯವೂ ವಿನಯವೂ ರಾಜಭಕ್ತಿಯೂ ಅಗಾಧವಾಗಿದ್ದದ್ದರಿಂದ ರಾಜನು ಇವನಲ್ಲಿ ಅಪರಿಮಿತವಾದ ಪ್ರೇಮವುಳ್ಳವನಾಗಿದ್ದನು. ಇದರಿಂದ ಆಸ್ಥಾನದ ಉಳಿದ ಪಂಡಿತರಿಗೆ ಭರ್ಜುವಿನಲ್ಲಿ ಅಸೂಯೆಯು ಹುಟ್ಟಿತು. ಇವರೆಲ್ಲರೂ ಒಗ್ಗಟ್ಟಾಗಿ ಬಾಗಿಲುಕಾಯುವವರಿಗೆ ಲಂಚವನ್ನು ಕೊಟ್ಟು ಅವನನ್ನು ಅರಮನೆಯೊಳಕ್ಕೆ ಕಾಲಿಡದಂತೆ ಮಾಡಿ ಭರ್ಜವು ಸತ್ತುಹೋದನೆಂದು ಸುಳ್ಳು ಸುದ್ದಿಹುಟ್ಟಿಸಿ ರಾಜನಿಗೆ ಈ ಸಂಗತಿಯನ್ನು ಮೆಲ್ಲಗೆ ತಿಳಿಸಿದರು. ರಾಜನು ಬಹುದಿನ ಇದಕ್ಕಾಗಿ ದುಃಖಪಟ್ಟು ಅನಿವಾರ್ಯವಾದದ್ದಕ್ಕೆ ಮಾಡುವದೇನೆಂದು ಕೊನೆಗೆ ಸುಮ್ಮನಾದನು.

ಭರ್ಜುವು ಈ ಸಂಗತಿಯನ್ನೆಲ್ಲ ರಾಜನಿಗೆ ತಿಳಿಸಬೇಕೆಂದು ಎಷ್ಟು ಪ್ರಯತ್ನಪಟ್ಟರೂ ಸಾಗಲಿಲ್ಲ. ಕೊನೆಗೆ ಒಂದು ದಿನ ರಾಜನು ಬೇಟೆಗೆ ಹೋಗಿದ್ದಕಾಲದಲ್ಲಿ ಈತನು ಒಂದು ಮರದಕೆಳಗೆ ಅವಿತುಕೊಂಡಿದ್ದು

---

1. ಕೇಳಬೇಕಾದದ್ದು, ಕೇಳಬಾರದ್ದು - ಎಂದು ಎರಡು ಪದಾರ್ಥಗಳಿರುವವು. ಮೊದಲನೆಯದನ್ನು ಕೇಳಿದರೆ ಸುಖವುಂಟು, ಎರಡನೆಯದನ್ನು ಕೇಳಿದರೆ ದುಃಖವಾಗುವದು, ಬ್ರಹ್ಮವೇ ಕೇಳತಕ್ಕದ್ದು, ಮಿಕ್ಕದ್ದನ್ನು ಕೇಳಬಾರದು - ಎಂದು ವೇದಾಂತದ ಡಂಗುರವು.

ಅಲ್ಲಿಂದ ''ಓ ರಾಜಾಧಿರಾಜ, ನಾನು ಭರ್ಜುವು, ನಿನ್ನ ಪಂಡಿತರ ಕಾಟದಿಂದ ನಿನ್ನ ದರ್ಶನಕ್ಕೂ ಅವಕಾಶವಿಲ್ಲದೆ ಒದ್ದಾಡುತ್ತಿದ್ದೇನೆ. ನನ್ನ ಕಷ್ಟವನ್ನು ಪರಿಹರಿಸಿ ಕಾಪಾಡಯ್ಯ !'' ಎಂದು ಗಟ್ಟಿಯಾಗಿ ಕೂಗಿದನು. ಕೂಡಲೆ ಪಂಡಿತರೆಲ್ಲ ಒಟ್ಟಿಗೆ ದೊರೆಯ ಎದುರಿಗೆ ಬಂದು ''ಮಹಾಪ್ರಭೂ, ತಾವು ಆ ಕಡೆಗೆ ನೋಡಬಾರದು ; ಭರ್ಜುವು ಸತ್ತು ಆರು ತಿಂಗಳಾಯಿತು. ಅವನನ್ನು ಈ ಸಮೀಪದಲ್ಲಿಯೇ ದಹನಮಾಡಿದರು. ಆತನು ಪಿಶಾಚಿಯಾಗಿ ಅಲ್ಲಲ್ಲಿ ಓಡಾಡುತ್ತಿರುವದುಂಟು. ಇದು ಪಿಶಾಚಿಯ ಧ್ವನಿಯೇ'' ಎಂದು ಹೇಳಿದರು. ರಾಜನು ಅವರ ಮಾತು ನಿಜವಾಗಿರಬೇಕೆಂದು ನಂಬಿ ಭೀತಿಯಿಂದ ಬೇಗನೆ ಮತ್ತೊಂದು ಕಡೆಗೆ ಹೊರಟುಹೋದನು.

ವೇದಾಂತವಾಕ್ಯದಲ್ಲಿ ಶ್ರದ್ಧೆಯಿಲ್ಲದವರ ಪಾಡೂ ಹೀಗೆಯೇ. ರಾಜನು ನಿಜವನ್ನು ನಿರ್ಧರಿಸಿಯೇತೀರಬೇಕೆಂದು ನಿಶ್ಚಯಮಾಡಿದ್ದರೆ ಇದ್ದ ಸಂಗತಿಯು ಹೊರಪಡುತ್ತಿತ್ತು ; ಆದರೆ ಅವನಿಗೆ ಮೋಸಗಾರರಾದ ಪಂಡಿತರ ಮಾತೇ ಪಥ್ಯವಾಯಿತು. ಪಂಡಿತರು ಸಂಖ್ಯೆಯಲ್ಲಿ ಬಹಳ ಜನವಿದ್ದಮಟ್ಟಿಗೇ ಅವರ ಮಾತು ನಿಜವೆಂಬುದಕ್ಕೆ ಪ್ರಮಾಣವೇನು ? - ಎಂಬುದು ಅವನ ವಿಚಾರಕ್ಕೆ ಬರಲಿಲ್ಲ. ಸಾಮಾನ್ಯವಾಗಿ ಎಷ್ಟೋ ಜನರು ಜಗತ್ತು ಸತ್ಯವೆಂದು ಹೇಳುವದು ನಿಜ ; ಆದರೆ ಅಷ್ಟಕ್ಕೇ ಆ ಮಾತು ನಿಜವಾಗಲಾರದು. ವಿಚಾರಮಾಡಿಯೇ ನೋಡಬೇಕು. ''ವಿಚಾರಮಾಡಿರುವ ದ್ವೈತಿಗಳೂ ಹಾಗೆಯೇ ಹೇಳುತ್ತಾರಲ್ಲ !'' ಎಂದರೆ ಅವರು ಭರ್ಜುವಿನ ಶತ್ರುಗಳಂತೆ ತಮ್ಮ ತಮ್ಮ ಮತಾಭಿನಿವೇಶದಿಂದ ಹಾಗೆ ಹೇಳುತ್ತಾರೆಯೊ, ಅಥವಾ ನಿಜವಾದ ತತ್ತ್ವವೂ ಹಾಗೆಯೇ ಇದೆಯೊ - ಎಂಬುದನ್ನು ನೋಡಬೇಕಲ್ಲವೆ ? ''ವೇದಾಂತವೆಂದರೆ ಜನರನ್ನೆಲ್ಲ ಸಂನ್ಯಾಸಿಗಳನ್ನಾಗಿ ಮಾಡುವ ದರ್ಶನ ; ಅದನ್ನು ಸಂಸಾರಿಗಳೂ ಅಭಿವೃದ್ಧಿಗೆ ಬರಬೇಕೆಂಬವರೂ ನೋಡಬಾರದು'' ಎಂದು ತಿಳಿವಳಿಕೆಸಾಲದವರೂ ವಿಷಯಾಸಕ್ತರೂ ಹೇಳಿದರೆ ಆ ಮಾತನ್ನೇ ನಂಬುವದು ಮೂಢ

ವಿಶ್ವಾಸವು ; ಪ್ರಮಾಣವನ್ನೂ ಅನುಭವವನ್ನೂ ನೋಡಿಕೊಂಡು ನಂಬುವದಕ್ಕೆ **ಶ್ರದ್ಧೆ**ಯೆಂದು ಹೆಸರು. ಗುರುವಾಕ್ಯದಲ್ಲಿಯೂ ವೇದಾಂತ ವಾಕ್ಯದಲ್ಲಿಯೂ ಇಂಥ ಶ್ರದ್ಧೆಯನ್ನಿಟ್ಟು ವಿಚಾರಮಾಡಿದರೆ ಬ್ರಹ್ಮವು ಸತ್ಯವೆಂದರೇನು ? ಜಗತ್ತು ಮಿಥ್ಯೆಯೆಂದರೇನು ?- ಎಂಬುದು ಮನಸ್ಸಿಗೆ ಹಿಡಿಯುವದು. ಯಾವ ವಿಚಾರಕ್ಕೂ ಅವಕಾಶಕೊಡದೆ ನಾಲ್ಕು ಜನರು ತಿಳಿದಂತೆ ತಿಳಿಯುವದೇ ಸರಿಯಾದದ್ದೆಂದು ನಂಬಿ ನಡೆಯುವಾತನು ಪಂಡಿತರ ವಾಕ್ಯದಿಂದ ಮೋಸಹೋದ ರಾಜನಂತೆ ನಿಜವನ್ನು ಕಾಣದೆ ಆತ್ಮವಂಚಕನಾಗುವನು.

# ೮. ಈಜುವ ಶಾಸ್ತ್ರ

## ಬ್ರಹ್ಮವಿದ್ಯೆ - ಮಿಕ್ಕಶಾಸ್ತ್ರಗಳು

**ಅವಿಜ್ಞಾತೇ ಜನ್ಮ ನಷ್ಟಂ ವಿಜ್ಞಾತೇ ಜನ್ಮಸಾರ್ಥಕಮ್ ।**
**ಜ್ಞಾತುರಾತ್ಮಾ ನ ದೂರೇ ಸ್ಯಾದಿತಿ ವೇದಾನ್ತಡಿಣ್ಡಿಮಃ** ॥[1]

ಒಂದು ದಿನ ಒಬ್ಬ ಮಹಾಪಂಡಿತನು ದೋಣಿಯಲ್ಲಿ ಕುಳಿತು ನರ್ಮದಾನದಿಯನ್ನು ದಾಟುತ್ತಿದ್ದನು. ದೋಣಿಯವನೂ ಸ್ವಲ್ಪ ಮಾತಿನವನಾದ್ದರಿಂದ ಇಬ್ಬರಿಗೂ ದಾರಿಯಲ್ಲಿ ಸಂಭಾಷಣೆಗೆ ಪ್ರಾರಂಭವಾಯಿತು. ಪಂಡಿತನು ಅಂಬಿಗನನ್ನು ಕುರಿತು ''ಏನಯ್ಯಾ, ನಿನಗೆ ತರ್ಕಶಾಸ್ತ್ರವು ಬರುತ್ತದೆಯೆ ?'' ಎಂದನು. ಅವನು ''ಇಲ್ಲ ಬುದ್ಧೀ, ಇಲ್ಲ ; ನನಗೆಲ್ಲಿಯ ತರ್ಕ?'' ಎಂದುತ್ತರವೀಯಲು ''ಅಯ್ಯೋ ! ತರ್ಕವೇ ಬಾರದೆ ? ತರ್ಕಶಾಸ್ತ್ರವು ಬಾರದಿದ್ದರೆ ಕಾಲುಪಾಲು ಜೀವಿತವೇ ವ್ಯರ್ಥವಾದಂತೆ.

1. ಬ್ರಹ್ಮವನ್ನು ಅರಿಯದಿದ್ದರೆ ಜನ್ಮವೇ ನಷ್ಟವಾದಂತೆ, ಇದನ್ನು ಅರಿತರೇ ಜನ್ಮವು ಸಾರ್ಥಕವಾಗುವದು. ತಿಳಿದಾತನಿಗೆ ಪರಮಾತ್ಮನು ಬಹಳ ಹತ್ತಿರವೇ ಇರುತ್ತಿರುವನೆಂಬುದು ವೇದಾಂತದ ಡಂಗುರವು.

ಹೋಗಲಿ, ನಿನಗೆ ವ್ಯಾಕರಣಶಾಸ್ತ್ರವಾದರೂ ಬರುತ್ತದೆಯೆ ?'' ಎಂದು ಕೇಳಿದನು. ಅಂಬಿಗರವನು ''ಇಲ್ಲ ಬುದ್ಧೀ, ಇಲ್ಲ ; ನನಗೆ ವ್ಯಾಕರಣವೂ ಬರುವದಿಲ್ಲ'' ಎಂದನು. ಪಂಡಿತನು ಮತ್ತೆ ಖೇದದಿಂದ ''ಛೀ ! ವ್ಯಾಕರಣಶಾಸ್ತ್ರವೂ ಬಾರದೆ ? ತರ್ಕವ್ಯಾಕರಣಗಳು ಇಲ್ಲದಿದ್ದರೆ ನಿನ್ನ ಜನ್ಮದಲ್ಲಿ ಅರ್ಧಭಾಗವೇ ಹಾಳಾದಂತೆ ! ಇದೂ ಹೋಗಲಿ, ನಿನಗೆ ಸಾಹಿತ್ಯಶಾಸ್ತ್ರವಾದರೂ ಬರುತ್ತದೆಯೊ ?'' ಎನ್ನಲು, ಅಂಬಿಗನು ''ಇಲ್ಲ, ಅದೂ ಇಲ್ಲ. ನನಗೆ ಆ ಶಾಸ್ತ್ರವನ್ನಾದರೂ ಹೇಳಿಕೊಡುವವರು ಯಾರು ಸ್ವಾಮಿ?'' ಎಂದನು. ಪಂಡಿತನು ಅತ್ಯಾಶ್ಚರ್ಯವನ್ನು ತೋರಿಸಿ ''ಸರಿ, ನಿನ್ನ ಜೀವಿತದಲ್ಲಿ ಈಗ ಮುಕ್ಕಾಲು ಪಾಲೇ ವ್ಯರ್ಥವಾದಂತಾಯಿತು. ತರ್ಕಶಾಸ್ತ್ರವಿಲ್ಲ, ವ್ಯಾಕರಣಶಾಸ್ತ್ರವಿಲ್ಲ, ಸಾಹಿತ್ಯಶಾಸ್ತ್ರವೂ ಇಲ್ಲ ! ಚೆನ್ನಾಯಿತು, ಚೆನ್ನಾಯಿತು !'' ಎಂದು ತಲೆಯನ್ನು ಅಲ್ಲಾಡಿಸುತ್ತಾ ತನ್ನ ಪಾಂಡಿತ್ಯಕ್ಕೆ ತಾನೇ ಹೆಮ್ಮೆಪಡುತ್ತಿದ್ದನು.

ಇಷ್ಟರಲ್ಲಿಯೇ ದೈವಗತಿಯಿಂದ ಮೇಲುಗಡೆಯಲ್ಲಿ ಎಲ್ಲಿಯೋ ಮಳೆಯಾಗಿದ್ದದ್ದರಿಂದ ನದಿಯ ಪ್ರವಾಹವು ಹೆಚ್ಚಿತು. ಅಂಬಿಗನು ಎಷ್ಟು ಸಾಹಸಮಾಡಿದರೂ ಸಾಗದೆ, ನದಿಯ ಸೆಳವು ದೋಣಿಯನ್ನೇ ಹೊಡೆದುಕೊಂಡು ಹೋಗುವ ಸ್ಥಿತಿ ಬಂದಿತು. ಆಗ ಅಂಬಿಗನು ಗಾಬರಿಯಿಂದ ''ಬುದ್ಧೀ ಇದೆಲ್ಲ ಹಾಗಿರಲಿ, ತಮಗೆ ಈಜುವ ಶಾಸ್ತ್ರ ಗೊತ್ತಿದೆಯೊ ?'' ಎಂದನು. ಪಂಡಿತನು ''ಹಾಗೆಂದರೇನು ? ಆ ಶಾಸ್ತ್ರದ ಹೆಸರನ್ನೇ ನಾನು ಕೇಳಿಲ್ಲವಲ್ಲ ! ಎಂದುತ್ತರವೀಯುವಷ್ಟರಲ್ಲಿ ಅಂಬಿಗರವನು ''ಹಾಗಾದರೆ ಸರಿ, ಈಗ ತಮ್ಮ ಪೂರ್ಣ ಜೀವಿತವೇ ಹೋದಂತಾಯಿತು. ಈ ವಿದ್ಯೆ ಬಾರದವರಿಗೆ ಯಾವ ಶಾಸ್ತ್ರವು ಬಂದಿದ್ದರೂ ಈಗ ಜೀವವುಳಿಯುವಂತಿಲ್ಲ'' ಎಂದು ಹೇಳಿದನಂತೆ !

ಬ್ರಹ್ಮವಿದ್ಯೆಯೂ ಇದರಂತೆಯೇ. ಇದೊಂದನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆ ; ಇದನ್ನು ತಿಳಿದರೇ ಹುಟ್ಟಿದ್ದು ಸಾರ್ಥಕವಾಯಿತು. ಇದನ್ನು ತಿಳಿಯದೆ ಕಾಕುಪೋಕುವಿದ್ಯೆಗಳನ್ನು ಎಷ್ಟು ಕಲಿತರೂ ಇಷ್ಟೇ.

ಬ್ರಹ್ಮವಿದ್ಯೆಯನ್ನು ಅರಿಯದವನ ಬಾಳು ವ್ಯರ್ಥ. ಆದರೆ ಇದನ್ನೇ ಅರಿತುಕೊಳ್ಳಬೇಕೆಂದು ಮನಸ್ಸು ಮಾಡಿದಹೊರತು, ಇದು ಸಾಮಾನ್ಯವಾಗಿ ದಕ್ಕುವದಿಲ್ಲ. ಆದ್ದರಿಂದಲೇ ''ಅದೇನು ಬ್ರಹ್ಮವಿದ್ಯೆಯೆ ?'' ಎಂಬ ನಾಣ್ಣುಡಿಯು ಹುಟ್ಟಿರುತ್ತದೆ.

------

# ೯. ಉಪದೇಶವನ್ನು ಕೇಳುವ ಶಿಷ್ಯ

## ಮುಮುಕ್ಷುತೆ - ಕುತೂಹಲ

**ಸುಪ್ತೇರುತ್ಥಾಯ ಸುಪ್ತ್ಯಂತಂ ಬ್ರಹ್ಮೈಕಂ ಪ್ರವಿಚಿನ್ತ್ಯತಾಮ್ ।**
**ನಾತಿದೂರೇ ನೃಣಾಂ ಮೃತ್ಯುರಿತಿ ವೇದಾನ್ತಡಿಣ್ಡಿಮಃ ॥**[1]

ಪೂರ್ವದಲ್ಲಿ ಒಬ್ಬ ಸಾಧುಗಳ ಬಳಿಯಲ್ಲಿ ಒಬ್ಬ ಶಿಷ್ಯನಿದ್ದನು. ಇವನು ತನಗೆ ತತ್ತ್ವವನ್ನುಪದೇಶಿಸಬೇಕೆಂದು ಗುರುಗಳನ್ನು ಬಹಳವಾಗಿ ಕಾಡುತ್ತಿದ್ದನು. ಆದರೂ ಅವರು ಅವನಿಗೆ ''ಆಗಾಗಲಿ, ಈಗಾಗಲಿ'' ಎಂದು ಹೇಳುತ್ತಾ ಇದ್ದರು.

ಒಂದು ದಿನ ಇವರಿಬ್ಬರೂ ಒಂದು ನದಿಯನ್ನು ದಾಟುತ್ತಿರುವಾಗ ಶಿಷ್ಯನು ಎತ್ತಲೋ ನೋಡುತ್ತಿದ್ದು ನದಿಯೊಳಕ್ಕೆ ಮುಗ್ಗರಿಸಿ ಬಿದ್ದನು. ಅವನು ಒಂದೆರಡು ಸಲ ಮುಳುಗಿ ಎದ್ದು ಕೊನೆಗೆ ಹೇಗೋ ದಡವನ್ನು ಸೇರೋಣವೆಂದು ಒಂದು ಗಿಡವನ್ನು ಹಿಡಿದುಕೊಳ್ಳುತ್ತಿರುವಲ್ಲಿ ಗುರುಗಳು ಅವನನ್ನು ಮತ್ತೆ ನದಿಯೊಳಕ್ಕೆ ನೂಕಿದರು. ಶಿಷ್ಯನು ಕೆಳಕ್ಕೆ ಮುಳುಗುತ್ತಲೂ ಮೇಲಕ್ಕೆ ಏಳುತ್ತಲೂ ಕೈಕಾಲು ಬಡಿತುಕೊಳ್ಳುತ್ತ ಒದ್ದಾಡುತ್ತಿದ್ದನು.

1. ಹಾಸಿಗೆಯಿಂದ ಎದ್ದು ಮತ್ತೆ ಮಲಗುವವರೆಗೂ ಬ್ರಹ್ಮವೊಂದನ್ನೇ ಚಿಂತಿಸುತ್ತಿರಬೇಕು. ಏಕೆಂದರೆ, ಜನರಿಗೆ ಮೃತ್ಯುವೆಂಬುದು ಹತ್ತಿರದಲ್ಲೇ ಕಾದುಕೊಂಡಿರುವದು. ಹೀಗೆಂಬುದು ವೇದಾಂತದ ಡಂಗುರವು.

ಸ್ವಲ್ಪ ಹೊತ್ತಾದ ಮೇಲೆ ಗುರುಗಳು ಇವನನ್ನು ಹೊರಕ್ಕೆ ಎಳೆದುಕೊಂಡರು. ಮೈ ಕೈ ಒರೆಸಿಕೊಂಡು ಸಮಾಧಾನವಾದಮೇಲೆ, 'ಏನಯ್ಯ, ನೀರಿನಲ್ಲಿ ಅಷ್ಟು ಕೈಕಾಲಾಡಿಸುತ್ತಿದ್ದೆಯಲ್ಲ, ಆಗ ನಿನಗೆ ಏನಾಗಬೇಕಾಗಿತ್ತು ?' ಎಂದು ಕೇಳಿದರು. ಅವನು 'ಸ್ವಾಮಿ. ಕೇಳಬೇಕಾದದ್ದೇನು ? ನನಗೆ ಆಗ ಬದುಕಿದರೆ ಸಾಕೆಂಬ ಇಷ್ಟವಿತ್ತು. ನನಗೆ ಆಗ ಮತ್ತೊಂದರ ಯೋಚನೆಯೇ ಇರಲಿಲ್ಲ' ಎಂದನು.

ಗುರುಗಳು 'ಸರಿ', ತತ್ತ್ವವಿಚಾರವೂ ಹೀಗೆಯೇ. ಕೈಕಾಲುಗಳನ್ನು ಬಡಿದುಕೊಂಡರೆ ನಿನ್ನ ಪೇಚಾಟವು ಯಾರಿಗಾದರೂ ತಿಳಿದೀತೆಂದಲ್ಲವೆ ನೀನು ಹಾಗೆ ಮಾಡಿದೆ ? ನಿನಗೆ ಬದುಕಬೇಕೆಂಬ ಆಸೆಯಿರುವದೆಂಬುದು ನೀನು ಹೇಳದೆಯೇ ಆಗ ದಾರಿಹೋಕರಿಗೆ ತಿಳಿಯುವಂತಿತ್ತು. ಅಲ್ಲವೆ ? ಹಾಗೆಯೇ ನಿನಗೆ ತತ್ತ್ವವನ್ನು ಅರಿಯಬೇಕೆಂಬ ಆಸೆಯಿರಬೇಕು. ನಿನಗೆ ಬ್ರಹ್ಮವನ್ನು ತಿಳಿದುಕೊಳ್ಳಬೇಕೆಂಬ ಆಸೆಯಿದೆಯೆಂಬುದು ನೀನು ಹೇಳದೆಯೇ ನಿನ್ನ ನಡತೆಯಿಂದಲೇ ಗೊತ್ತಾಗುವಂತಿರಬೇಕು. ಪ್ರಾಣವನ್ನು ಉಳಿಸಿಕೊಳ್ಳುವದಕ್ಕೆ ಮಿಕ್ಕದ್ದೆಲ್ಲವನ್ನೂ ಹೇಗೆ ಮರೆತಿದ್ದೆಯೋ ಅದರಂತೆ ತತ್ತ್ವಕ್ಕೋಸ್ಕರ ಪ್ರಪಂಚದ ಆಸೆಯೆಲ್ಲವನ್ನೂ ತೊರೆದಿರಬೇಕು'ಎಂದು ಹೇಳಿದರಂತೆ.

ಲೋಕದಲ್ಲಿ ಎಷ್ಟೋ ಜನರು ತಾವು ಮುಮುಕ್ಷುಗಳೆಂದು ನಂಬಿರುವರು. ಆದರೆ ಅವರು ತಮ್ಮ ಲೌಕಿಕವ್ಯವಹಾರವನ್ನೆಲ್ಲ ಮುಗಿಸಿಕೊಂಡು ಮಿಕ್ಕಕಾಲದಲ್ಲಿ ವಿನೋದಕ್ಕಾಗಿ ಚೆಂಡು ಮುಂತಾದ ಆಟವನ್ನು ಇಟ್ಟುಕೊಂಡಿರುವಂತೆಯೇ ವೇದಾಂತವಿಚಾರವನ್ನೂ ಸ್ವಲ್ಪ ಇಟ್ಟುಕೊಂಡಿರುವದುಂಟು. ಅಂಥ ಕುತೂಹಲವಿದ್ದಮಾತ್ರದಿಂದ ಬ್ರಹ್ಮವನ್ನು ಅರಿಯುವದಕ್ಕಾಗಲಾರದು. ಇದಕ್ಕೆ ಮುಮುಕ್ಷುತೆಯೂ ಬೇಕು. ನದಿಯಲ್ಲಿ ಬಿದ್ದ ಶಿಷ್ಯನು ತನ್ನ ಪ್ರಾಣವೇ ಹೋಗುವದೆಂದು ಖಂಡಿತವಾಗಿ ನಂಬಿ ಹೇಗಾದರೂ ಪಾರಾಗಬೇಕೆಂದು ಹೇಗೆ ಒದ್ದಾಡಿದನೋ ಅದರಂತೆ ಹುಟ್ಟಿದವರೆಲ್ಲರಿಗೂ ಮೃತ್ಯು ಹತ್ತಿರವಾಗಿರುವದೆಂಬುದನ್ನು ಮನಸ್ಸಿನ

ಲ್ಲಿಟ್ಟು ಮತ್ತೊಂದನ್ನು ಯೋಚನೆಗೆ ತರದೆ ಬೆಳಗ್ಗೆ ಎದ್ದಾಗಿನಿಂದ ರಾತ್ರೆ ಮಲಗುವವರೆಗೂ ಎಡೆಬಿಡದೆ ಬ್ರಹ್ಮಚಿಂತನೆಯನ್ನೇ ಮಾಡುತ್ತಿರಬೇಕು ಇಂಥ ಬಲವಾದ ಬ್ರಹ್ಮಜ್ಞಾನೇಚ್ಛೆಗೆ **ಮುಮುಕ್ಷುತ್ವ**ವೆಂದು ಹೆಸರು.

# ೧೦. ಗಾಂಧಾರದೇಶದ ಸಾಹುಕಾರ

## ಪ್ರತ್ಯಗ್ದೃಷ್ಟಿ-ಪರಾಗ್ದೃಷ್ಟಿ

**ದೃಗ್ ದೃಶ್ಯೌ ತೌ ಪದಾರ್ಥೌ ದ್ವೌ ಪರಸ್ಪರವಿಲಕ್ಷಣೌ ।**
**ದೃಗ್ ಬ್ರಹ್ಮ ದೃಶ್ಯಂ ಮಾಯಾ ಸ್ಯಾದಿತಿ ವೇದಾನ್ತಡಿಣ್ಡಿಮಃ ॥**[1]

ಗಾಂಧಾರದೇಶದಲ್ಲಿ ಒಬ್ಬ ಸಾಹುಕಾರನಿದ್ದನು. ಒಂದುದಿನ ಇವನ ಮನೆಗೆ ಕಳ್ಳರು ನೆಂಟರ ವೇಷದಲ್ಲಿ ಬಂದು ರಾತ್ರಿಯಲ್ಲಿ ಇವನು ನಿದ್ರೆ ಮಾಡುತ್ತಿರುವಾಗ ಬೇಕಾದಷ್ಟು ಹಣವನ್ನು ದೋಚಿಕೊಂಡು 'ಇವನು ಎಲ್ಲಿಯಾದರೂ ಎದ್ದು ಗಲಾಟೆ ಎಬ್ಬಿಸಿಯಾನು, ಇವನನ್ನೇ ಸ್ಥಳಪಲ್ಲಟ ಮಾಡಿಬಿಡುವದೊಳ್ಳೆಯದು'- ಎಂದು ಆತನಿಗೆ ಕಣ್ಣುಕಟ್ಟಿ ದೂರ ಹೊತ್ತುಕೊಂಡುಹೋಗಿ, ಒಂದು ದಿಕ್ಕೂತೋಚದಂತಿರುವ ಕಗ್ಗಾಡಿನಲ್ಲಿ ಹಿಂಗಟ್ಟು ಮುರಿಕಟ್ಟಿ ಅವನನ್ನು ಅಲ್ಲಿ ಮುಳ್ಳುಗಿಡಗಳಿಂದ ಕೂಡಿದ ಒಂದು ಗುಂಡಿಯಲ್ಲಿ ಹಾಕಿಬಿಟ್ಟು, ತಮ್ಮ ದಾರಿಯನ್ನು ಹಿಡಿದರು. ಆತನು ಕಟ್ಟನ್ನು ಬಿಚ್ಚಿಕೊಳ್ಳುವದಕ್ಕೂ ಇಲ್ಲದೆ ಆ ದಾರಿಯಲ್ಲಿ ಯಾರಾದರೂ ಬರುತ್ತಾರೋ ಇಲ್ಲವೋ ಎಂಬುದನ್ನು ತಿಳಿಯುವದಕ್ಕೂ ಇಲ್ಲದೆ ಬಹುಸಂಕಟದಿಂದ ಕಿರಿಚಿಕೊಳ್ಳುತ್ತಿದ್ದನು.

ದೈವವಶದಿಂದ ಆ ಸಮೀಪದಲ್ಲಿ ಹೋಗುತ್ತಿದ್ದ ದಾರಿಹೋಕನೊಬ್ಬನು ಆ ಆರ್ತಧ್ವನಿಯನ್ನು ಕೇಳಿ ಕರುಣೆಯಿಂದ ಅಲ್ಲಿಗೆ ಬಂದು

1. ನೋಡುವದು, ನೋಡಲ್ಪಡತಕ್ಕದ್ದು-ಎಂದು ಒಂದಕ್ಕೊಂದು ಬೇರೆಯ ಲಕ್ಷಣವುಳ್ಳ ಎರಡು ಪದಾರ್ಥಗಳಿರುವವು. ನೋಡುವದೇ ಬ್ರಹ್ಮವು, ನೋಡಲ್ಪಡತಕ್ಕದ್ದೇ ಮಾಯೆ- ಎಂದು ವೇದಾಂತದ ಡಂಗುರವು.

'ಯಾರಪ್ಪ, ಅಳುವವರು ?' ಎಂದು ಕೇಳಿದನು. ಈ ಸಾಹುಕಾರನು 'ಅಯ್ಯ, ಪುಣ್ಯಾತ್ಮ, ನೀನು ಯಾರಾದರೂ ಆಗಿರು, ದಯವಿಟ್ಟು ನನ್ನನ್ನು ಮೇಲಕ್ಕೆತ್ತಿ ಕೈಕಾಲುಗಳನ್ನು ಬಿಚ್ಚಿದರೆ ನನಗೊದಗಿರುವ ವಿಪತ್ತನ್ನು ಆಮೇಲೆ ತಿಳಿಸುವೆನು. ಇಷ್ಟುಪಕಾರವನ್ನು ಮಾಡಿ ಪುಣ್ಯಕಟ್ಟಿಕೊ' ಎಂದು ದೀನನಾಗಿ ಬೇಡಿಕೊಂಡನು. ಆ ದಾರಿಹೋಕನು 'ಅಯ್ಯೊ ! ಇವನಿಗೆ ಯಾರೋ ತುಂಬ ತೊಂದರೆಕೊಟ್ಟಿದ್ದಾರೆ' ಎಂದು ಕನಿಕರದಿಂದ ಗುಂಡಿಯೊಳಕ್ಕೆ ಇಳಿದು ಮೆಲ್ಲಗೆ ಈಚೆಗೆ ತೆಗೆದುಹಾಕಿ ಕಣ್ಣುಗಳನ್ನು ಬಿಚ್ಚಿದನು.

ಈಗ ಸಾಹುಕಾರನು ಸ್ವಲ್ಪ ಸುಧಾರಿಸಿಕೊಂಡು 'ಬದುಕಿದಹಾಗಾಯಿತಪ್ಪ. ನಾನು ಗಾಂಧಾರದೇಶದವನು. ಕಳ್ಳರ ಮೋಸಕ್ಕೆ ಸಿಕ್ಕಿ ಈ ಪಾಡುಪಟ್ಟಿದ್ದಾಯಿತು. ದಯವಿಟ್ಟು ನಮ್ಮ ದೇಶದ ದಾರಿಯನ್ನು ತೋರಿಸಿದರೆ ಆ ಕಡೆಗೆ ಹೊರಡುತ್ತೇನೆ. ನಿನ್ನ ಉಪಕಾರವನ್ನು ಎಂದಿಗೂ ಮರೆಯುವದಿಲ್ಲ' - ಎಂದು ಕೇಳಿಕೊಂಡನು. ದಾರಿಹೋಕನು 'ಅಯ್ಯ, ಇದು ಸಿಂಧುದೇಶ ; ಇಲ್ಲಿಂದ ಉತ್ತರಕ್ಕೆ ಹೋಗು, ಆಮೇಲೆ ಪಶ್ಚಿಮಕ್ಕೆ ತಿರುಗು, ಅಲ್ಲಿಂದ ಸ್ವಲ್ಪ ವಾಯುವ್ಯಕ್ಕೆ ಹೋಗು, ಆ ಕಡೆಗೆ ಗಾಂಧಾರದೇಶವಿರುವದು'- ಎಂದು ಕೆಲವು ಹೆಗ್ಗುರುತುಗಳನ್ನು ತಿಳಿಯಿಸಿದನು. ಈ ಸಾಹುಕಾರನು ಆತನು ಹೇಳಿದ ಹೆಗ್ಗುರುತುಗಳನ್ನೆಲ್ಲ ನೆನಪಿನಲ್ಲಿಟ್ಟುಕೊಂಡು ಸ್ವಲ್ಪ ತನ್ನ ಬುದ್ಧಿಯನ್ನೂ ಸೇರಿಸಿಕೊಂಡು ಊಹಿಸುತ್ತಾ ಕೊನೆಗೆ ಗಾಂಧಾರದೇಶವನ್ನು ತಲುಪಿ ಅಲ್ಲಿ ಎಂದಿನಂತೆ ಸುಖವಾಗಿರುತ್ತಿದ್ದನು.

ಗಾಂಧಾರದೇಶದ ಸಾಹುಕಾರನಂತೆಯೇ ನಾವೂ ಚಂಚಲವಾದ ನಮ್ಮ ಮನಸ್ಸಿನಲ್ಲಿ ಕಲೆತುಕೊಂಡು ಹೊರದೃಷ್ಟಿಯುಳ್ಳವರಾಗಿಬಿಟ್ಟಿದ್ದೇವೆ. ಸಾಹುಕಾರನು ಕಳ್ಳರನ್ನು ನೆಂಟರೆಂದು ನಂಬಿ ಮೋಸಹೋದಂತೆಯೇ ಇಂದ್ರಿಯಗಳನ್ನು ನಮ್ಮ ಪ್ರಿಯಮಿತ್ರರೆಂದು ಭಾವಿಸಿದ್ದೇವೆ. ಕಳ್ಳರು ಸಾಹುಕಾರನನ್ನು ಒಯ್ದಂತೆಯೇ ಈ ಇಂದ್ರಿಯಗಳು ನಮ್ಮನ್ನೂ ಬಾಹ್ಯಪ್ರಪಂಚವೆಂಬ ಕಗ್ಗಾಡಿಗೆ ಒಯ್ಯುತ್ತಿರುವವು. ಅವರು ಆತನನ್ನು

ಗುಂಡಿಯೊಳಕ್ಕೆ ಹಾಕಿದಂತೆಯೇ ನಮ್ಮನ್ನೂ ಇವು ವಿಷಯಕೂಪದಲ್ಲಿ ಕೆಡಹುತ್ತಿರುವವು. ಅವನು ಮುಳ್ಳುಗಿಡಗಳಿಂದ ವ್ಯಥೆಪಟ್ಟಂತೆಯೇ ನಾವೂ ಶಬ್ದ, ಸ್ಪರ್ಶ, ರೂಪ, ರಸ, ಗಂಧ - ಎಂಬ ವಿಷಯಗಳಿಂದಾಗುವ ಸುಖ ದುಃಖರೂಪವಾದ ಅನುಭವಗಳೆಂಬ ವ್ಯಥೆಯನ್ನು ಹೊಂದುತ್ತಿರುವೆವು. ದಾರಿಹೋಕನು ಕಣ್ಣುಕಟ್ಟನ್ನು ಬಿಚ್ಚುತ್ತಲೂ ಸಾಹುಕಾರನಿಗೆ ಕಣ್ಣು ಕಂಡಂತೆಯೇ, ಸದ್ಗುರುವು ಅನುಗ್ರಹಮಾಡುತ್ತಲೂ ನಮಗೆ ಪ್ರತ್ಯಗ್ದೃಷ್ಟಿಯೆಂಬ ಒಳನೋಟವು ಬರುವದು. ಮನಸ್ಸಿನೊಡನೆ ಕಲೆತು ನೋಡುವ ಹೊರನೋಟಕ್ಕೆ **ಪರಾಗ್ದೃಷ್ಟಿ**ಯೆಂದು ಹೆಸರು. ಈ ಮನಸ್ಸನ್ನೂ ಹೊರದಬ್ಬಿ ಅದನ್ನೂ ಅದರ ವಿಷಯಗಳನ್ನೂ ಸೇರಿಸಿಕೊಂಡು ಈ ಎಲ್ಲವನ್ನೂ ನೋಡುವ ಒಳನೋಟಕ್ಕೆ **ಪ್ರತ್ಯಗ್ದೃಷ್ಟಿ**ಯೆಂದು ಹೆಸರು. ಸಾಹುಕಾರನು ತನ್ನ ಬುದ್ಧಿಬಲದಿಂದಲೂ ದಾರಿಹೋಕನ ದಯೆಯಿಂದಲೂ ಊರು ಸೇರಿದಂತೆ ಸದ್ಗುರುವಿನ ಬೋಧೆಯನ್ನನುಸರಿಸಿ ಈ ಒಳನೋಟವನ್ನು ಹೊಂದಿ ಶಾಸ್ತ್ರಶ್ರವಣವನ್ನು ಮಾಡುತ್ತಾ ಬ್ರಹ್ಮವನ್ನು ಅನುಭವಕ್ಕೆ ತಂದುಕೊಳ್ಳಬೇಕಾಗಿರುವದೆಂಬುದು ವೇದಾಂತದ ಮುಖ್ಯೋಪದೇಶವು.

# ೧೧. ಹಳೆಯ ಕಡತದ ಅರ್ಥ

## ಗುರೂಪದೇಶ - ಶಾಸ್ತ್ರವಿಚಾರ

**ದ್ವಿಜತ್ವಂ ವಿಧ್ಯನುಷ್ಠಾನಾದ್ವಿಪ್ರತ್ವಂ ವೇದಪಾಠತಃ ।**
**ಬ್ರಾಹ್ಮಣ್ಯಂ ಬ್ರಹ್ಮವಿಜ್ಞಾನಾದಿತಿ ವೇದಾನ್ತಡಿಣ್ಡಿಮಃ ॥**[1]

1. ಶಾಸ್ತ್ರದಲ್ಲಿ ಹೇಳಿರುವಂತೆ ನಡೆಯುವವನು ದ್ವಿಜನು ವೇದವನ್ನು ಅಧ್ಯಯನಮಾಡಿದವನು ವಿಪ್ರನು ; ಆದರೆ ಬ್ರಹ್ಮವನ್ನು ಅರಿತಾತನೇ ಬ್ರಾಹ್ಮಣನೆನಿಸುವನು- ಎಂಬುದು ವೇದಾಂತದ ಡಂಗುರವು.

ಒಂದೂರಿನಲ್ಲಿ ಒಬ್ಬ ಸಾಹುಕಾರನಿದ್ದನು. ಇವನು ಲಕ್ಷಗಟ್ಟಲೆಯಾಗಿ ಹಣವನ್ನು ಸಂಪಾದಿಸಿ ವ್ಯವಹಾರವನ್ನು ಮಾಡುತ್ತಿದ್ದು ಕೊನೆಗೆ ದೈವಾಧೀನನಾದನು. ಸಾಯುವಕಾಲಕ್ಕೆ ಇವನಿಗೆ ಒಬ್ಬನೇ ಒಬ್ಬ ಚಿಕ್ಕ ಹುಡುಗನಿದ್ದನು. ಇವನನ್ನು ತಂದೆಯು ಬಲುಮುದ್ದಿನಿಂದ ಸಾಕಿದ್ದರಿಂದ ಇವನು ಬರುಬರುತ್ತ ಚೆಲ್ಲಾಟಕ್ಕೆ ಬಿದ್ದು ಹಣವನ್ನೆಲ್ಲ ಪೋಲುಮಾಡಿಕೊಂಡು ದರಿದ್ರನಾದನು.

ಒಂದುದಿನ ಇವನು ತಂದೆಯ ಕಾಲದ ಹಳೆಯ ಕಡತಗಳನ್ನೆಲ್ಲ ತಿರುಗಿಸಿ ತಿರುಗಿಸಿ ನೋಡುತ್ತಿರುವಲ್ಲಿ ಒಂದು ಖಾತೆಯಲ್ಲಿ 'ದೇವಸ್ಥಾನದ ಗೋಪುರದಲ್ಲಿ ಚೈತ್ರಮಾಸದ ಶುದ್ಧನವಮಿಯ ದಿನ ಮಧ್ಯಾಹ್ನದಮೇಲೆ ಎರಡು ಘಂಟೆಗೆ ಸರಿಯಾಗಿ ಎರಡುಲಕ್ಷ ರೂಪಾಯಿಗಳನ್ನು ಇಟ್ಟಿರುತ್ತದೆ'-ಎಂದು ಬರೆದಿತ್ತು. ಹೊಟ್ಟೆಗಿಲ್ಲದೆ ವ್ಯಥೆಪಡುತ್ತಿದ್ದ ಈತನಿಗೆ ಮಿತಿಮೀರಿದ ಸಂತೋಷವಾಗಿ ಇವನು ಕೂಡಲೆ ಗೋಪುರವನ್ನು ಕೆಡವಿಸಿದನು. ಅಲ್ಲಿ ಯಾವ ಹಣವೂ ದೊರೆಯಲಿಲ್ಲ. 'ವಯಸ್ಸಾಗಿದ್ದ ನಮ್ಮಪ್ಪನು ಏನೋ ಮರವಿನಿಂದ ಹೀಗೆ ಲೆಕ್ಕದಲ್ಲಿ ಬರೆದಿರಬೇಕು ; ಗುಡಿಯಲ್ಲಿ ಮತ್ತೆಲ್ಲಿಯೋ ಹಣವಿರಬಹುದು' ಎಂದು ಹತ್ತಿಪ್ಪತ್ತು ಕೂಲಿಗಳನ್ನು ಇಟ್ಟು ದೇವಸ್ಥಾನವನ್ನೇ ಕೆಡವಿಸಿ ನೋಡಿದನು. ಎಲ್ಲಿಯೂ ಯಾವ ಹಣವೂ ಸಿಕ್ಕಲಿಲ್ಲ. 'ಬಡತನದ ಜತೆಗೆ ಬ್ರಹ್ಮೇತಿ' ಎಂಬಂತೆ ಇವನಿಗೆ ದೇವರಗುಡಿಯನ್ನು ಹಾಳುಮಾಡಿದ ಅಪಕೀರ್ತಿಯೊಂದು ಗಂಟುಬಿತ್ತು.

ಹೀಗೆ ದಿಕ್ಕುತೋಚದೆ ಮನೆಯಲ್ಲಿ ದುಃಖಪಡುತ್ತಾ ಕುಳಿತಿರುವಲ್ಲಿ ಇವರಪ್ಪನ ಜೊತೆಗಾರನೊಬ್ಬನು ಇವನ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋಗುವದಕ್ಕಾಗಿ ಬಂದನು. ಈ ಹುಡುಗನು ನಡೆದ ಸಂಗತಿಯನ್ನೆಲ್ಲ ಅವನಲ್ಲಿ ಹೇಳಿಕೊಂಡು ಅತ್ತನು. ಆಗ ಹೊಸ ಸಾಹುಕಾರನು 'ಹೆದರಬೇಡ, ಕಡತವನ್ನು ತೆಗೆದುಕೊಂಡು ಬಾ' ಎಂದು ತರಿಸಿ ನೋಡಲಾಗಿ ದೇವಸ್ಥಾನದ ಉದ್ದ, ಅಗಲ, ಎತ್ತರ-ಮುಂತಾಗಿ ತಳಹದಿಯ ನಕ್ಷೆಯನ್ನು ಮೊದಲುಗೊಂಡು ಎಲ್ಲವನ್ನೂ ವಿಸ್ತಾರವಾಗಿ ಒಂದುಕಡೆ ಬರೆದಿತ್ತು.

ಕೂಡಲೆ ಈ ಸಾಹುಕಾರನು ದೇವಸ್ಥಾನವನ್ನು ತಾನೇ ಹಣಕೊಟ್ಟು ಮೊದಲಿನಂತೆ ಕಟ್ಟಿಸಿ ಚೈತ್ರಮಾಸಕ್ಕೆ ತಾನು ಬರುವದಾಗಿ ಹೇಳಿ ಹೊರಟುಹೋದನು.

ಚೈತ್ರಶುದ್ಧ ನವಮಿಯ ದಿನ ಇಬ್ಬರೂ ಸೇರಿ ದೇವಸ್ಥಾನಕ್ಕೆ ಹೋಗಿ ಪ್ರದಕ್ಷಿಣೆಯನ್ನು ಮಾಡಿಕೊಂಡು ಬರುವಹೊತ್ತಿಗೆ ಸರಿಯಾಗಿ ಎರಡು ಘಂಟೆಯಾಯಿತು. ಆಗ ಸಾಹುಕಾರನು ಗೋಪುರದ ನೆರಳು ಬಿದ್ದಿದ್ದ ಸ್ಥಳ ದಲ್ಲಿ ಕೂಲಿಗಳಿಂದ ಅಗೆತಮಾಡಿಸಿ ನೋಡಲಾಗಿ ಒಂದು ಕೊಪ್ಪರಿಗೆಯು ಕಂಡುಬಂತು. ಅದರ ತುಂಬ ವರಹಗಳಿದ್ದವು. ಸಾಹುಕಾರನ ಮಗನ ಆನಂದಕ್ಕೆ ಪಾರವೇ ಇಲ್ಲವಾಯಿತು.

ಸಾಹುಕಾರನು ಬರೆದಿದ್ದ ಕಡತವನ್ನು ಅವನ ಜೊತೆಗಾರನೂ ಮಗನೂ ಇಬ್ಬರೂ ನೋಡಿದರು. ಆದರೆ ಅದರ ಸರಿಯಾದ ಅರ್ಥವು ವ್ಯವಹಾರ ಚತುರನಾದ ಗೆಳೆಯನಿಗೆ ತಿಳಿಯಿತೇ ಹೊರತು ಅವಿವೇಕಿಯಾದ ಮಗನಿಗೆ ತಿಳಿಯಲಿಲ್ಲ. ಗೋಪುರದಲ್ಲಿ ಲಕ್ಷಗಟ್ಟಲೆಯ ರೂಪಾಯಿಗಳಿರು ವದು ಅಸಂಭವವೆಂಬುದೂ ಒಂದುವೇಳೆ ಇದ್ದರೂ ಅದನ್ನು ಇಟ್ಟ ಮಾಸ, ಪಕ್ಷ, ತಿಥಿ, ಘಳಿಗೆ-ಮುಂತಾದ ಮುಹೂರ್ತವಿಶೇಷವನ್ನು ವ್ಯವಹಾರ ವನ್ನರಿತ ಸಾಹುಕಾರನು ಕಾರಣವಿಲ್ಲದೆ ಕಡತದಲ್ಲಿ ಬರೆಯಲಾರನೆಂಬುದೂ ಆ ಹುಡುಗನಿಗೆ ಹೊಳೆಯಲಿಲ್ಲ. ಜೊತೆಗಾರನಿಗೆ ಇದೆಲ್ಲ ಗೊತ್ತಾಯಿತು. ಇದರಂತೆಯೇ ವೇದಾಂತಶಾಸ್ತ್ರವು ಎಲ್ಲರಿಗೂ ಕಾಣುವಂತೆ ಪುಸ್ತಕಗಳಲ್ಲಿ ಬರೆದಿದ್ದರೂ ಅನುಭವಿಯಾದ ಸದ್ಗುರುವಿಗೊಬ್ಬನಿಗೇ ಅದರ ತಾತ್ಪರ್ಯವು ಗೊತ್ತಾಗುವದೇ ಹೊರತು ಮತ್ತೊಬ್ಬನ ಬುದ್ಧಿಗೆ ಅದು ಮಿಂಚಲಾರದು. ಆರುಶಾಸ್ತ್ರಗಳನ್ನೂ ಬಲ್ಲವನಾದರೂ ವೇದಾಂತತತ್ತ್ವ ವನ್ನು ತಾನೇ ಕಂಡುಕೊಂಡೇನೆಂದು ಹೆಮ್ಮೆಪಡಬಾರದು. ಅನುಭವ ವಿರುವ ಸಾಧುಗಳನ್ನು ಶರಣುಹೊಕ್ಕು ಅವರ ಕೃಪೆಯಿಂದ ಕೃತಾರ್ಥನಾಗು ವದಕ್ಕೆ ಯತ್ನಿಸಬೇಕು.

# ೧೨. ಬಾಯಿವೇದಾಂತ

## ಅನುಭವ - ಶಾಸ್ತ್ರಪಾಂಡಿತ್ಯ

**ನ ಮತಾಭಿನಿವೇಶೇನ ನ ಭಾಷಾವೇಷಮಾತ್ರತಃ ।**
**ಮುಕ್ತಿರ್ವಿನಾತ್ಮವಿಜ್ಞಾನಮಿತಿ ವೇದಾನ್ತಡಿಣ್ಡಿಮಃ ॥**[1]

ಮಹಾರಾಷ್ಟ್ರ ರಾಜ್ಯದ ಸ್ಥಾಪಕನಾದ ಛತ್ರಪತಿ ಶಿವಾಜಿಯ ಗುರುಗಳೂ ಸುಪ್ರಸಿದ್ಧ ಸಾಧುವರ್ಯರೂ ಆದ ಸಮರ್ಥರಾಮದಾಸರೆಂಬವರು ಮಹಾಜ್ಞಾನಿಗಳು. ಅವರ ಬಳಿಯಲ್ಲಿ ಒಬ್ಬ ವೇದಾಂತ ಶಾಸ್ತ್ರವನ್ನು ಓದಿಕೊಂಡ ಪಂಡಿತನಿದ್ದನು. ಇವನು ತತ್ತ್ವಶಾಸ್ತ್ರದ ಮರ್ಮವನ್ನು ತಾನು ಬಲ್ಲೆನೆಂದು ತೋರಿಸಿಕೊಳ್ಳುವದಕ್ಕಾಗಿ ಆಗಾಗ್ಗೆ ಸಮರ್ಥರ ಮುಂದೆ 'ಜಗತ್ತೆಂಬುದು ಹಗ್ಗದಲ್ಲಿ ತೋರುವ ಹಾವಿನಂತೆ ಮಿಥ್ಯೆಯಾಗಿರುವದು. ಆತ್ಮವೊಂದೇ ಸತ್ಯವು'- ಎಂದು ಶಾಸ್ತ್ರದ ಮಾತುಗಳನ್ನು ಆಡಂಬರವಾಗಿ ಆಡುತ್ತಿದ್ದನು :

ಸಮರ್ಥರು ಜನಗಳಲ್ಲಿ ದೈವಭಕ್ತಿಯನ್ನೂ ಶಾಂತಿ, ದಾಂತಿ-ಮೊದಲಾದ ಸಾಧನಗಳನ್ನೂ ಬೆಳೆಯಿಸಿದರೆ ಸರಿಯಾದ ನೀರುಗೊಬ್ಬರಗಳಿಂದ ಬೆಳೆದ ಗಿಡದಲ್ಲಿ ಕಾಲಕ್ಕೆ ಸರಿಯಾಗಿ ಹಣ್ಣುಬಿಡುವಂತೆ ಸದ್ಗುರೂಪದೇಶ, ಸಚ್ಛಾಸ್ತ್ರಶ್ರವಣ, ಸನ್ಮಾರ್ಗದ ವಿಚಾರ- ಇವುಗಳಿಂದ ಜ್ಞಾನವು ತಾನೇ ಹುಟ್ಟುವದೆಂಬ ಉದ್ದೇಶದಿಂದ ಮುಖ್ಯವಾಗಿ ಸಾಧನವನ್ನೇ ಹೆಚ್ಚಾಗಿ ಹೇಳುತ್ತಿದ್ದರು. ಈ ಪಂಡಿತನುಮಟ್ಟಿಗೆ ಯಾವ ಸಾಧನವನ್ನೂ ಮಾಡದೆ ವೇದಾಂತದ ಮಾತುಗಳನ್ನೇ ಬಳಸುತ್ತ ವಿಷಯವನ್ನು ತಿಳಿಯಬೇಕೆಂಬ ಸಚ್ಛಿಷ್ಯರಿಗೂ ಅಡ್ಡಿಯಾಗಿರುತ್ತಿದ್ದನು.

---

1. ವೇದಾಂತಮತದಲ್ಲಿ ಅಭಿಮಾನವಿದ್ದಮಾತ್ರಕ್ಕೇ ಅಥವಾ ವೇದಾಂತದ ಮಾತನ್ನು ಆಡುತ್ತಿದ್ದಮಾತ್ರಕ್ಕೇ ಅಥವಾ ಸಂನ್ಯಾಸವೇ ಮುಂತಾದ ವೇಷವನ್ನು ಹಾಕಿಕೊಂಡಮಾತ್ರಕ್ಕೇ ಆತ್ಮಜ್ಞಾನವಿಲ್ಲದೆ ಮೋಕ್ಷವಾಗಲಾರದೆಂದು ವೇದಾಂತದ ಡಂಗುರವು.

ಹೀಗಿರಲು ಒಂದು ದಿನ ಒಬ್ಬ ಗಾರುಡಿಯುವನು ಒಂದು ಆಟವನ್ನು ಪ್ರಾರಂಭಿಸಿ ಎಲ್ಲರಿಗೂ ಒಂದು ಹಗ್ಗವನ್ನು ತೋರಿಸಿ ತನ್ನ ಕೈಚಳಕದಿಂದ ಅದನ್ನು ಹಾವಿನಂತೆ ಮಾರ್ಪಡಿಸಿ ಒಂದುಕಡೆ ಹಾಕಿದನು. ಆಗ ಸಮರ್ಥರು ಪಂಡಿತನನ್ನು 'ಅಯ್ಯ, ಆ ಹಗ್ಗವನ್ನು ಇಲ್ಲಿ ತಾ, ನೋಡೋಣ' ಎಂದರು. ಹೆಡೆಯನ್ನು ಬಿಟ್ಟುಕೊಂಡು ಆಡುವ ಹಾವಿನಂತೆ ಇದ್ದ ಹಗ್ಗವನ್ನು ನೋಡಿ ಪಂಡಿತನು ಭಯದಿಂದ ಮಾತನಾಡದೆ ಸುಮ್ಮನೆ ಕೂತಿದ್ದನು. ಸಮರ್ಥರು 'ಏನಯ್ಯ, ಪಂಡಿತೋತ್ತಮ, ಇದು ಹಗ್ಗದ ಹಾವಲ್ಲವೆ ? ಇದಕ್ಕೇಕೆ ಹೆದರುತ್ತೀಯೆ ? ಕೂಡಲೆ ಹೋಗಿ ತೆಗೆದು ಕೊಂಡು ಬಾ' ಎನ್ನಲು, ಆತನು 'ಸ್ವಾಮಿ, ಅದು ನಿಜವಾಗಿಯೂ ಹಾವೆಂದೇ ನನಗೆ ತೋರುತ್ತದೆ' ಎಂದನು. ಸಮರ್ಥರು ತಾವೇ ಎದ್ದು ಅಲ್ಲಿಗೆ ಹೋಗಿ ಅದನ್ನು ಹಿಡಿದುಕೊಂಡು ಬಂದರು. ಅದು ನಿಜವಾಗಿ ಹಗ್ಗವೇ ಆಗಿತ್ತು !

ಜಗತ್ತು ಮಿಥ್ಯೆ, ಬ್ರಹ್ಮವು ಸತ್ಯ- ಎಂದು ವೇದಾಂತದಲ್ಲಿ ಹೇಳುತ್ತದೆ ಯಷ್ಟೆ. ಇದೇ ಸರಿಯೆಂದು ಹೂಗುಟ್ಟುತ್ತ ವೇದಾಂತದಿಂದ ಆರಿಸಿದ ಎಂಜಲುಮಾತುಗಳನ್ನು ಆಡಿದಮಾತ್ರದಿಂದ ಜನರಿಗೆ ಯಾವಪ್ರಯೋ ಜನವೂ ಆಗಲಾರದು. ದೇಹವು ನಾನೆಂಬ ಬುದ್ಧಿಯು ಈಗ ಎಷ್ಟು ಗಟ್ಟಿಯಾಗಿರುವದೊ 'ದೇಹವೇ ಮುಂತಾದವುಗಳನ್ನು ನೋಡುತ್ತಿರುವ ಚೈತನ್ಯವೇ ನಾನು' ಎಂಬ ತಿಳಿವಳಿಕೆಯೂ ಅಷ್ಟರಮಟ್ಟಿಗೇ ಗಟ್ಟಿಯಾಗ ಬೇಕು. ಆಗ ಮಾತ್ರವೇ ವೇದಾಂತದ ಪೂರ್ಣಪ್ರಯೋಜನವಾಗುವದು. ವೇದಾಂತವೆಂಬುದು ಮಾಡಬೇಕಾದ ಒಂದು ಕರ್ಮವಲ್ಲ ; ಅಥವಾ ಆಡಬೇಕಾದ ಶಾಸ್ತ್ರದ ಮಾತೂ ಅಲ್ಲ. **ವೇದಾಂತಜ್ಞಾನ**ವೆಂಬುದು ಆತ್ಮಸ್ವರೂಪದ ಅರಿವು. ಆತ್ಮವನ್ನರಿತವರಿಗೆ ಮಾತ್ರವೇ ವೇದಾಂತದ ಪ್ರಯೋಜನವಾಗುವದು. ಹಾವಿನಂತೆ ತೋರುತ್ತಿದ್ದರೂ ಅದು ಹಗ್ಗವೇ ಎಂಬ ತತ್ತ್ವವನ್ನು ಬಲ್ಲವರಾದ್ದರಿಂದ ಸಮರ್ಥರು ಧೈರ್ಯದಿಂದ ಅದನ್ನು ಹಿಡಿದುಕೊಂಡರು ; ಪಂಡಿತನು ವೇದಾಂತದ ಮಾತುಗಳನ್ನು ಎಷ್ಟು

ಹೇಳುತ್ತಿದ್ದರೂ ಹಗ್ಗವು ಹಾವಿನಂತೆ ಇರುವದುಂಟೆಂಬುದನ್ನು ಬಲ್ಲವನಾದರೂ, ಇದು ಹಾವೊ, ಹಗ್ಗವೊ - ಎಂಬ ಸಂದೇಹವು ಆತನಿಗೆ ಹೋಗಿರಲಿಲ್ಲವಾದ್ದರಿಂದ ಅವನಿಗೆ ಭಯವಾಯಿತು. ಜಗತ್ತಿನ ತತ್ತ್ವವನ್ನು ಸಮರ್ಥರಂತೆ ನಿಸ್ಸಂದೇಹವಾಗಿ ತಿಳಿದಿರುವವನಿಗೇ ಮುಕ್ತಿಯಾಗು ವದೆಂಬುದು ವೇದಾಂತದ ಸಿದ್ಧಾಂತವಾಗಿದೆ.

# ೧೩. ನಿಷ್ಕಾಮಚಕ್ರವರ್ತಿ

## ಪರಮಾರ್ಥ - ವ್ಯವಹಾರ

**ನಾಮರೂಪಾತ್ಮಕಂ ವಿಶ್ವಮಿನ್ದ್ರಜಾಲಂ ವಿದುರ್ಬುಧಾಃ ।**
**ಅನಾಮತ್ವಾದರೂಪತ್ವಾದಿತಿ ವೇದಾನ್ತಡಿಣ್ಡಿಮಃ ॥**[1]

ಪೂರ್ವದಲ್ಲಿ ನಿಷ್ಕಾಮನೆಂಬ ಒಬ್ಬಾನೊಬ್ಬ ಚಕ್ರವರ್ತಿಯಿದ್ದನು. ಅವನ ಕೈಕೆಳಗೆ ನೂರಾರು ಸಾಮಂತರಾಜರು ಆಳುತ್ತಿದ್ದರು. ಅವನಿಗಿದ್ದ ಗಜಾಂತೈಶ್ವರ್ಯದಿಂದ ಅವನು ಇಂದ್ರನಿಗೆ ಸಮನಾಗಿ ಸುಖಪಡುತ್ತಿದ್ದನು. ಮನೆಯಮುಂದೆ ಎಷ್ಟೋ ಮಾಹುತರೂ ಕಾಲಾಳುಗಳೂ ಕಾದುಕೊಂಡಿರು ತ್ತಿದ್ದರು. ಅರಮನೆಯು ಇಂದ್ರಭವನದಂತೆ ಸುಖದ ತೌರುಮನೆ ಯಾಗಿತ್ತು. ಆತನಿಗೆ ಅಚ್ಚುಮೆಚ್ಚಾದ ಸುಶೀಲೆಯಾದ ಒಬ್ಬ ಹೆಂಡತಿಯೂ, ವಿದ್ಯಾವಂತರೂ ವಿವೇಕಿಗಳೂ ಆದ ಮಕ್ಕಳೂ ಬೇಕುಬೇಕಾದ ಎಲ್ಲಾ ಭೋಗಸಾಮಗ್ರಿಗಳೂ ಇದ್ದದ್ದರಿಂದ ಯಾವದಕ್ಕೂ ಕೊರತೆಯಿರಲಿಲ್ಲ.

ಹೀಗಿರುವಲ್ಲಿ ಒಂದು ದಿನ ಚಕ್ರವರ್ತಿಯು ಮೃಷ್ಟಾನ್ನವನ್ನು ಊಟ ಮಾಡಿ ಹೂಗಂಧಗಳನ್ನು ಸ್ವೀಕರಿಸಿ ತಾಂಬೂಲವನ್ನು ಹಾಕಿಕೊಳ್ಳುತ್ತಾ

1. ನಾಮ, ರೂಪ-ಇವುಗಳಿಂದಾಗಿರುವ ಈ ಪ್ರಪಂಚವು ಇಂದ್ರಜಾಲದಂತೆ ಮಿಥ್ಯೆಯಾಗಿರುವದು. ಏಕೆಂದರೆ ಸರಿಯಾಗಿ ನೋಡಿದರೆ ನಾಮವೂ ಇಲ್ಲ, ರೂಪವೂ ಇಲ್ಲ- ಎಂಬುದು ವೇದಾಂತದ ಡಂಗುರವು.

ಮಂಚದಮೇಲೆ ಸುಖವಾಗಿ ಕುಳಿತಿದ್ದನು. ಪಟ್ಟದರಸಿಯೇ ಬೀಸಣಿಗೆಯನ್ನು ಬೀಸುತ್ತಿದ್ದಳು. ದಾಸದಾಸಿಯರು ನಿಶ್ಯಬ್ದವಾಗಿ ಯಾವಾಗ ಏನು ಅಪ್ಪಣೆಯಾಗುವದೋ ಎಂದು ಕಾದಿದ್ದರು. ಬಾಗಿಲಲ್ಲಿ ಬಿಚ್ಚುಕತ್ತಿಯ ಪಹರೆಯವರಿಬ್ಬರು ನಿಂತಿದ್ದರು.

ಇಷ್ಟರಲ್ಲಿ ಚಕ್ರವರ್ತಿಗೆ ಸ್ವಲ್ಪ ಝೊಂಪುನಿದ್ರೆ ಬಂತು. ಆಗ ಅವನಿಗೆ ಕನಸಾದದ್ದು ಹೇಗೆಂದರೆ : ಇದ್ದಕ್ಕಿದ್ದಹಾಗೆಯೇ ಶತ್ರುರಾಜರು ಪಟ್ಟಣವನ್ನು ನುಗ್ಗಿ ರಾಜನನ್ನು ಊರಿನಿಂದ ಹೊರಡಿಸಿಬಿಟ್ಟರು. ಈತನು ತನಗೆ ಸಹಾಯಮಾಡುವವರು ಯಾರೂ ಇಲ್ಲದೆ ಕಾಡಿನಲ್ಲಿ ಕಲ್ಲುಮುಳ್ಳುಗಳ ಮೇಲೆ ನಡೆಯುತ್ತಾ ಹಸಿವುಬಾಯಾರಿಕೆಗಳಿಂದ ಕಂದಿಕುಂದಿ ಏನೂ ತೋಚದೆ ಒಂದು ಮರದ ನೆರಳಿನಲ್ಲಿ ಕೂತುಕೊಳ್ಳೋಣವೆಂದು ಯೋಚಿಸುತ್ತಿರುವಷ್ಟರಲ್ಲಿ ಒಂದು ಕೃಷ್ಣಸರ್ಪವು ಬಂದು ಇವನ ಕಾಲನ್ನು ಕಚ್ಚಿತು. ಇವನಿಗೆ ಆದ ವ್ಯಥೆಯನ್ನು ಹೇಳತೀರದು. ಇನ್ನು ತನಗೆ ವಿಷವೇರುತ್ತ ಬಂತೆಂದೂ ಮರಣಕಾಲವೇ ಸಮೀಪಿಸಿತೆಂದೂ ಭಯದಿಂದ ರಾಜನು ಕಿಟ್ಟನೆ ಕಿರಿಚುತ್ತ ಮೂರ್ಛೆಬಿದ್ದನು.

ಇಷ್ಟರಲ್ಲಿ ಇವನಿಗೆ ಎಚ್ಚರವಾಗಿಬಿಟ್ಟಿತು. 'ಬುದ್ಧೀ, ಏನಪ್ಪಣೆ ?' ಎಂದು ಕಾವಲುಗಾರರು ಕೇಳುತ್ತಿದ್ದಾರೆ ; 'ನಾಥನೆ, ಏನು ಕಳವಳ ? ಸುಗಂಧಯುಕ್ತವಾದ ಈ ಶೀತಲೋದಕವನ್ನು ತೆಗೆದುಕೊಳ್ಳುವೆಯ ?' ಎಂಬ ಪತ್ನಿಯ ಮಧುರೋಕ್ತಿಗಳು ಕೇಳಿಬರುತ್ತಿವೆ. ಪಂಜರದಲ್ಲಿದ್ದ ಮುದ್ದುಗಿಳಿಯು 'ರಾಮ' ಎನ್ನುತ್ತಿದೆ ; ವಿನೋದಸಾಮಗ್ರಿಗಳೆಲ್ಲ ಎಂದಿನಂತೆ ಕೋಣೆಯಲ್ಲಿ ತುಂಬಿ ತುಳುಕುತ್ತಿವೆ ! ಚಕ್ರವರ್ತಿಯು 'ಓಹೋ! ಕನಸಾಯಿತೇ ಹೊರತು ಮತ್ತೇನೂ ಇಲ್ಲ' ಎಂದುಕೊಂಡು ಹುಸಿನಗೆಯಿಂದ ಕೂಡಿದ ಮುಖವುಳ್ಳವನಾಗಿ ತನ್ನ ಸ್ಥಿತಿಗೆ ತಾನೇ ಆಶ್ಚರ್ಯಪಡುತ್ತಿದ್ದನು.

ನಸುನಿದ್ದೆಯ ಕಾರಣದಿಂದ ನಿಷ್ಕಾಮಚಕ್ರವರ್ತಿಗೆ ಇಲ್ಲದ ಅನರ್ಥವು ತೋರಿದಂತೆಯೇ ಅವಿಚಾರವೆಂಬ ಗಾಢನಿದ್ರೆಯ ದೆಸೆಯಿಂದ ನಮಗೆ ಸಂಸಾರವೆಂಬ ದೊಡ್ಡ ಕನಸಾಗಿರುವದು. ಕನಸನ್ನು ನಿಜವೆಂದು ನಿಷ್ಕಾಮನು ಮುಹೂರ್ತಕಾಲ ಕಂಡಂತೆ ನಾವೂ ಈ ಸಂಸಾರವನ್ನು ಕಾಣುತ್ತಾ ನಿಜವೆಂದು ನಂಬಿರುವೆವು.

ಹೆಂಡಿರುಮಕ್ಕಳು, ಹೊಲಮನೆ, ಹಣಕಾಸು, ನೆಂಟರಿಷ್ಟರು, ಸುಖ, ದುಃಖ - ಮುಂತಾದ ನೋಟಗಳೆಲ್ಲ ಅವಿಚಾರದ ದೆಸೆಯಲ್ಲಿ ನಿಜವೆಂದೇ ತೋರುವವು. ಈ ಸ್ಥಿತಿಗೆ **ವ್ಯವಹಾರಾವಸ್ಥೆ**ಯೆಂದು ಹೆಸರು. ಹೀಗೆ ವ್ಯವಹಾರವನ್ನು ಮಾಡಿ ಮಾಡಿ ಬೇಸತ್ತು 'ಇದು ದಿಟವೊ, ಸುಳ್ಳೊ?' ಎಂದು ವಿಚಾರಮಾಡತೊಡಗಿದ ಕೂಡಲೆ, ಪರಮೇಶ್ವರಾನುಗ್ರಹದಿಂದ ಸಚ್ಛಾಸ್ತ್ರವೂ ಸದ್ಗುರುವೂ ದೊರಕಿ ಈ ಸಂಸಾರವೆಲ್ಲ ಕನಸಿಗಿಂತ ಕಡೆಯೆಂಬ ಅರಿವಾಗಿ ಎಚ್ಚರಗೊಳ್ಳುವೆವು. ಆ ಸ್ಥಿತಿಗೆ **ಪರಮಾರ್ಥಾವಸ್ಥೆ**ಯೆಂದು ಹೆಸರು.

# ೧೪. ಮುತ್ತಿನ ಕಂಠಿಯನ್ನು ಕಳೆದುಕೊಂಡ ಹುಡುಗಿ

## ಬ್ರಹ್ಮ - ಆತ್ಮ

**ಸರ್ವಾತ್ಮತ್ವಾತ್ ಪರಂ ಬ್ರಹ್ಮ ಶ್ರೋತುರಾತ್ಮತಯಾ ಸ್ಥಿತಮ್ ।**
**ನಾಯಾಸಸ್ತತ್ತ್ವವಿಜ್ಞಪ್ತಾವಿತಿ ವೇದಾನ್ತಡಿಣ್ಡಿಮಃ ॥**[1]

1. ಪರಬ್ರಹ್ಮವೆಂಬುದು ಎಲ್ಲರಿಗೂ ಆತ್ಮನಾದ್ದರಿಂದ ವೇದಾಂತವನ್ನು ಶ್ರವಣಮಾಡುವವನ ಆತ್ಮನೇ ಆಗಿರುವದು. (ಆದ್ದರಿಂದ) ಅದನ್ನು ತಿಳಿಯುವದರಲ್ಲಿ ಯಾವ ಶ್ರಮವೂ ಇರುವದಿಲ್ಲವೆಂದು ವೇದಾಂತದ ಡಂಗುರವು.

ಎಂದರೆ ಮೂರವಸ್ಥೆಗಳಲ್ಲಿ ಎಲ್ಲಾ ಪ್ರಪಂಚವೂ ಅಡಕವಾಗಬೇಕು ; 'ಬ್ರಹ್ಮನು ಸಾರಥಿಯಾಗಬೇಕು', 'ವೇದಗಳು ಗಾಲಿಗಳಾಗಬೇಕು' ಎಂದರೆ ಶ್ರೋತ್ರಿಯನಾದ ಸದ್ಗುರುವಿನ ಸಹಾಯದಿಂದ ವೇದಗಳ ಸಾರವನ್ನು ಗ್ರಹಿಸಬೇಕು. 'ಮೇರುಪರ್ವತವು ಬಿಲ್ಲಾಗಬೇಕು, ಮತ್ತು ಆದಿಶೇಷನು ಬಿಲ್ಲಿನ ಹುರಿಯಾಗಬೇಕು' ಎಂದರೆ ಅಷ್ಟೈಶ್ವರ್ಯವನ್ನೂ ಬಿಲ್ಲಿನಂತೆ ತನ್ನ ವಶದಲ್ಲಿ ಬಗ್ಗಿಸಿಟ್ಟುಕೊಳ್ಳಬೇಕು, ಅದಕ್ಕೆ ವಶನಾಗದೆ ಇರಬೇಕು ; ಮತ್ತು ಸರ್ಪದಂತಿರುವ ಬುದ್ಧಿಯನ್ನು ಬಿಗಿಹಿಡಿಯಬೇಕು. 'ವಿಷ್ಣುವೇ ಬಾಣವಾಗಬೇಕು' ಎಂದರೆ ಮೂರವಸ್ಥೆಗಳಲ್ಲಿಯೂ ವ್ಯಾಪಿಸಿಕೊಂಡಿರುವ ಆತ್ಮಸ್ವರೂಪದ ಕಡೆಗೆ ಮನಸ್ಸು ತಿರುಗಬೇಕು. ಪ್ರತ್ಯಗ್ದೃಷ್ಟಿಯನ್ನು ಅಭ್ಯಾಸ ಮಾಡುತ್ತಿರಬೇಕು. ಹೀಗೆ ಮಾಡುತ್ತಿದ್ದರೆ ಕೊನೆಗೆ ದಿವ್ಯಸಹಸ್ರ ವರ್ಷಕ್ಕೆ ಮೂರು ಪುರಗಳೂ ಒಂದಾದಂತೆ, ಮೂರವಸ್ಥೆಗಳನ್ನೂ ಒಂದೇ ಸಮ ವಾಗಿ ಕಾಣುವ ನಿಷ್ಪಕ್ಷಪಾತಬುದ್ಧಿಯು ಬರುವದು. ಈ ಬುದ್ಧಿಯಿಂದ ನೋಡಿದ ಕ್ಷಣವೇ ಮುಕ್ಕಣ್ಣನಿಂದ ಮುಪ್ಪುರಗಳೂ ಸುಟ್ಟು ಬೂದಿ ಯಾದಂತೆ ಮೂರವಸ್ಥೆಗಳೂ ಮಿಥ್ಯೆಯೆಂಬ ಅರಿವು ಉಂಟಾಗುವದು.

# ೧೬. ಶುದ್ಧಾತ್ಮರಾಜ

## ಆತ್ಮ - ಬುದ್ಧಿ

**ಬುದ್ಧಿರ್ನಾಹಮಹಂ ದೇವೋ ಬುದ್ಧಿಸಾಕ್ಷೀತಿ ನಿಶ್ಚಯಾತ್ ।**
**ಕರ್ತೃಭಾವನಿವೃತ್ತಿಃ ಸ್ಯಾದಿತಿ ವೇದಾನ್ತಡಿಣ್ಡಿಮಃ ॥**[1]

1. 'ನಾನು ಬುದ್ಧಿಯಲ್ಲ, ಬುದ್ಧಿಸಾಕ್ಷಿಯಾದ ದೇವನೇ ನಾನು' - ಹೀಗೆಂದು ನಿಶ್ಚಯಮಾಡಿಕೊಳ್ಳುವದರಿಂದ ನಾನು ಕರ್ತೃವೆಂಬ ಭಾವನೆಯು ಹೋಗಿಬಿಡುವದು. ಇದು ವೇದಾಂತದ ಡಂಗುರವು.

ಒಂದಾನೊಂದು ದೇಶದಲ್ಲಿ ಶುದ್ಧಾತ್ಮನೆಂಬ ರಾಜನಿದ್ದನು. ಆತನು ಪ್ರಜೆಗಳಲ್ಲೆಲ್ಲ ನಿಷ್ಪಕ್ಷಪಾತವಾದ ಪ್ರೇಮದಿಂದ ಇರುತ್ತಾ ಎಲ್ಲರಿಗೂ ಆನಂದವನ್ನುಂಟುಮಾಡುತ್ತಿದ್ದದ್ದರಿಂದ ರಾಜಧಾನಿಯಲ್ಲಿಯೇ ಇದ್ದರೂ ಎಲ್ಲಾ ಅಧಿಕಾರಿಗಳೂ ಅವನ ಆಜ್ಞಾನುಸಾರವಾಗಿ ನಡೆಯುತ್ತಿದ್ದರು. ರಾಜನ ಇರುವಿಕೆ ಎಲ್ಲೆಲ್ಲಿಯೂ ತೋರಿಕೊಳ್ಳುತ್ತಿತ್ತು.

ಹೀಗಿರುವಾಗ ಒಂದು ದಿನ ರಾಜನು ಬೇಟೆಗೆಂದು ಹೊರಟು ದಾರಿಯಲ್ಲಿ ತನ್ನೊಳಗೆ ತಾನು ಅಂದುಕೊಂಡದ್ದೇನೆಂದರೆ : ''ನನ್ನ ರಾಜ್ಯಕ್ಕೆ ಮಿಗಿಲಾದದ್ದು ಯಾವದೂ ಇಲ್ಲ ; ಈಗಿನ ಕಾಲದಲ್ಲಿ ನನ್ನಷ್ಟು ಪರಾಕ್ರಮಶಾಲಿಯಾಗಿಯೂ ರಾಜ್ಯಭಾರಕ್ರಮವಿಚಕ್ಷಣನಾಗಿಯೂ ಇರುವ ಪ್ರಭುವು ಯಾವನೂ ಕಾಣುವದಿಲ್ಲ. ಹಿಂದಿನ ಕಾಲದಲ್ಲಿಯೂ ಇದ್ದಂತೆ ತೋರಲಿಲ್ಲ''.

ಹೀಗಿ ತಾನೇ ಧನ್ಯನೆಂದುಕೊಳ್ಳುತ್ತಿದ್ದ ಈ ರಾಜನಿಗೆ ಅಹಂಕಾರವು ಬಂದಕೂಡಲೆ ಭೃತ್ಯರೆಲ್ಲ, ಅದೇಕೊ, ಭಗವಂತನ ಮಾಯೆಯಿಂದ ಹೊಲಬುದಪ್ಪಿ ಎಲ್ಲೆಲ್ಲಿಯೋ ಚದರಿದರು. ರಾಜನು ಯಾವದೋ ಒಂದು ಮೃಗವನ್ನು ಬೆನ್ನಟ್ಟುವ ನೆಪದಿಂದ ಬಲುದೂರ ಹೋಗಿಬಿಟ್ಟನು. ಆಯಾಸ ಪಟ್ಟಿದ್ದ ಕುದುರೆಯನ್ನು ಸಮೀಪದಲ್ಲಿಯೇ ನಗರವಿರಬೇಕೆಂಬ ಭ್ರಮೆಯಿಂದ ಅಲ್ಲಿಯೇ ಬಿಟ್ಟು ಕಾಲುನಡಿಗೆಯಿಂದ ಹೊರಟನು. ಆದರೆ ಎಷ್ಟು ಸುತ್ತಿದರೂ ಜನರ ಸುಳಿವೇ ಕಾಣಲಿಲ್ಲ. ಬಿಸಿಲಿನ ತಾಪಕ್ಕೆ ರಾಜವೇಷದ ಉಡುಪು ಬಲುಭಾರವಾಗಿ ಕಂಡದ್ದರಿಂದ ಅವುಗಳನ್ನೆಲ್ಲ ಕಿತ್ತೊಗೆದು ಒಳಅಂಗಿಯನ್ನು ಮಾತ್ರ ಇಟ್ಟುಕೊಂಡು ಮುಂದೆ ಹೊರಟನು. ಎಷ್ಟು ನಡೆದರೂ ದಾರಿ ಸಿಗಲಿಲ್ಲ.

ಶುದ್ಧಾತ್ಮರಾಜನು ಅಲ್ಲಿ ಬಿದ್ದು ಇಲ್ಲಿ ಬಿದ್ದು ಕೊನೆಗೆ ತುಂಬ ಬಳಲಿ ಬೆಂಡಾಗಿ, ಹಾಗೂ ಹೀಗೂ ನಡೆಯುತ್ತ ತನ್ನ ಉದ್ಯಾನವನದ ಸಮೀಪಕ್ಕೆ ಬಂದು ಸೇರಿದನು. ಇವನ ದುರದೃಷ್ಟಕ್ಕೆ ವನಪತಿಗೆ ರಾಜನ ಗುರುತೇ

ಇರಲಿಲ್ಲ ; ಆದ್ದರಿಂದ ಇವನು ಬೇಡಿಕೊಂಡರೂ ಅಲ್ಲಿ ಒಂದು ಕಸುಗಾಯಿ ಕೂಡ ಸಿಕ್ಕದೆಹೋಯಿತು. ದಂಡಯಾತ್ರೆ ಹೊರಟಿರುವ ಸೇನಾಧಿಪತಿಯನ್ನು ದಾರಿಯಲ್ಲಿ ಕಂಡನು ; ಅವನೊಡನೆ ಮಾತಾಡೋಣವೆಂದರೆ ಸೈನಿಕರಿಗೂ ಈತನ ಗುರುತಿಲ್ಲದೆ ಇದ್ದದ್ದರಿಂದ ಯಾರೂ ಇವನನ್ನು ಅವನ ಬಳಿಗೆ ಹೋಗಗೊಡಲಿಲ್ಲ. ಅಪಮಾನದಿಂದ ನೊಂದುಕೊಂಡು ಕೊನೆಗೆ ನಗರಪ್ರವೇಶವನ್ನು ಮಾಡುವದಕ್ಕೆ ಹೋಗಲು, ದುರ್ಗರಕ್ಷಕರು ಬಹುವಾಗಿ ಗೋಳಾಡಿಸಿ ಕೊನೆಗೆ ಹೇಗೋ ಒಳಕ್ಕೆ ಬಿಟ್ಟರು.

ಅರಮನೆಯೊಳಕ್ಕೆ ಪ್ರವೇಶಮಾಡುವದಂತೂ ಶತಕ್ರತುವನ್ನು ಮಾಡಿದಂತಾಯಿತು. ಅಲ್ಲಿ ದಿನದಿನವೂ ಬರುತ್ತಿದ್ದ ರಾಜವೈದ್ಯನು ಕೂಡ ಇವನನ್ನು ಗುರುತಿಸದೆಹೋದನು. ತಾನು ರಾಜನೆಂದು ಎಷ್ಟು ವಿಧವಾಗಿ ಹೇಳಿಕೊಂಡರೂ ಯಾರೂ ಕೇಳಲಿಲ್ಲ. ರಾಜನ ಅಂತಃಪುರದಲ್ಲಿದ್ದ ಚಂದ್ರಮುಖಿಯೆಂಬ ದಾಸಿಯು ಕೂಡ ಇವನನ್ನು ಹುಚ್ಚನೆಂದು ಹಾಸ್ಯ ಮಾಡುತ್ತಾ ''ಇಗೊ, ಹೊಸ ಮಹಾರಾಜರು ದಯಮಾಡಿಸಿದ್ದಾರೆ'' ಎಂದು ರಾಣಿಯ ಮುಂದೆ ವಿನೋದಕ್ಕಾಗಿ ಕರೆದುಕೊಂಡು ಹೋಗಿಬಿಟ್ಟಳು. ಅಲ್ಲಿ ನೋಡಿದರೊ, ಶುದ್ಧಾತ್ಮರಾಜನಂತೆಯೇ ಇದ್ದ ಇನ್ನೊಬ್ಬನು ರಾಣಿಯ ಪಕ್ಕದಲ್ಲಿ ಕುಳಿತಿದ್ದಾನೆ ! ಇನ್ನು ರಾಜನಿಗೆ ತಡೆಯುವದಕ್ಕಾಗದೆ ಹೋಯಿತು. ತನಗಾದ ಅವಮಾನವನ್ನೂ ದುಃಖವನ್ನೂ ಕಳೆದುಕೊಳ್ಳುವದಕ್ಕೆ ಈ ಪೃಥ್ವಿಯಲ್ಲಿಯೇ ಅವಕಾಶವಿಲ್ಲವೆಂದು ತಿಳಿದು ಮೂರ್ಛೆಯಿಂದ ದೊಪ್ಪನೆ ನೆಲದಮೇಲೆ ಬಿದ್ದನು.

ರಾಜನ ವೇಷದಲ್ಲಿ ಕುಳಿತಿದ್ದವನು ಭಗವಂತನೇ ಆದ್ದರಿಂದ ಆ ದಯಾನಿಧಿಯು ಕೂಡಲೆ ಎಲ್ಲರಿಗೂ ಬುದ್ಧಿಯಲ್ಲಿ ಬೇರೊಂದು ಬಗೆಯಾಗಿ ಪ್ರೇರಣೆಪುಟ್ಟಿಸಿ ತಾನು ಮಾಯವಾದನು. ಮಹಾರಾಣಿಯು ತನ್ನ ಪ್ರಿಯಪತಿಯು ನೆಲದಮೇಲೆ ಬಿದ್ದಿರುವದನ್ನು ಕಂಡು [illegible], "ಯಾರಲ್ಲಿ? ಕೂಡಲೆ ರಾಜವೈದ್ಯನನ್ನು ಕರೆಹೇಳಿರಿ !" [illegible], ಕೂಗಿಕೊಂಡಳು. ವೈದ್ಯನು ಬಂದು ನಾಡಿಯನ್ನು ನೋಡಿ [illegible] [illegible]

ರಸವಾಗಬೇಕೆಂದು ಹೇಳಲು ಸೇನಾಧಿಪತಿಗೆ ಈ ಸುದ್ದಿಯು ಮುಟ್ಟಿ ಅವನು ತಾನೇ ಉದ್ಯಾನಕ್ಕೆ ಹೋಗಿ ವನಪಾಲರ ಒಡೆಯನಿಂದ ಬೇಕುಬೇಕಾದ ಹಣ್ಣುಗಳನ್ನು ಒಂದಡಿಕೆಕಡಿಯುವ ಹೊತ್ತಿನಲ್ಲಿ ಹೊರಿಸಿಕೊಂಡು ಬಂದನು. ರಾಜನಿಗೆ ಆ ರಸವನ್ನು ಕುಡಿಸಿದರೊ ಇಲ್ಲವೊ, ಕೂಡಲೆ ಅವನು ಚೇತರಿಸಿಕೊಂಡು ಎದ್ದುಕುಳಿತನು. ಮುಂದೆ ನೋಡುತ್ತಾನೆ, ರಾಣಿ, ಸಖಿ, ವೈದ್ಯ, ಸೇನಾಧಿಪತಿ, ವನಪಾಲ - ಎಲ್ಲರೂ ಕೈಕಟ್ಟಿಕೊಂಡು ಮುಂದೇನಾಗುವದೋ ಎಂದು ಉಸಿರುಹುಯ್ಯದೆ ನಿಂತುಕೊಂಡು ನೋಡುತ್ತಿದ್ದಾರೆ !

ಶುದ್ಧಾತ್ಮರಾಜನಿಗೆ 'ನಾನೇ ಎಲ್ಲವನ್ನೂ ಮಾಡುತ್ತಿದ್ದೇನೆ' ಎಂಬ ಬುದ್ಧಿಯು ಬಂದಕೂಡಲೆ ಯಾರೂ ಇವನನ್ನು ಗುರುತಿಸದೆ ಹೋದಂತೆಯೇ ಆತ್ಮಸ್ವರೂಪವನ್ನು ಮರೆತು 'ಬುದ್ಧಿಯೇ ನಾನು' ಎಂಬ ಅರಿವು ನಮಗೆ ಬಂತೆಂದರೆ ನಮ್ಮ ಸ್ಥಿತಿಯೂ ಬೇರ್ಪಡುವದು. ವನಪಾಲನಂತೆ ಇರುವ ನಮ್ಮ ದೇಹವು ನಮ್ಮನ್ನು ಲಕ್ಷ್ಯಮಾಡುವದಿಲ್ಲ ; ಸೇನಾಧಿಪನಂತೆ ಇರುವ ಪ್ರಾಣವು ಸರಿಯಾಗಿ ಕೆಲಸಮಾಡದೆ ಹೋಗುವದು ; ನಗರರಕ್ಷಕರಂತೆ ಇರುವ ಇಂದ್ರಿಯಗಳು ಒಳನೋಟವನ್ನು ಕೊಡದೆ ನಮ್ಮನ್ನು ಹೊರದಬ್ಬುವವು ; ರಾಜವೈದ್ಯನಂತೆ ಇರುವ ಮನಸ್ಸು ನಮ್ಮನ್ನು ನೋಡಿ ನಗುವದು ; ಪ್ರಿಯಪತ್ನಿಯಂತೆ ಇರುವ ಬುದ್ಧಿಯೂ ಸಖಿಯಂತೆ ಇರುವ ಉತ್ತಮಬುದ್ಧಿವೃತ್ತಿಯೂ ಅನಾದರದಿಂದ ಕಾಣುವವು. ಇಷ್ಟಾದರೂ ನಮ್ಮ ನಿಜವಾದ ಸ್ವರೂಪವು ಆಗಲೂ ಎಲ್ಲಿಯೂ ಹೋಗಿರುವದಿಲ್ಲ ; ರಾಣಿಯ ಪಕ್ಕದಲ್ಲಿ ಕೂತಿದ್ದ ರಾಜವೇಷದ ದೇವರಂತೆ ಇದ್ದಲ್ಲಿಯೇ ಇದ್ದುಕೊಂಡು ಇರುವದು.

ಈ ಆತ್ಮಸ್ವರೂಪದ ಕಡೆಗೆ ನಮ್ಮ ದೃಷ್ಟಿಯು ಬಿತ್ತೆಂದರೆ 'ನಾನು ಎಲ್ಲವನ್ನೂ ಮಾಡುವ ಕರ್ತೃ' ಎಂಬ ಬುದ್ಧಿಗೆ ಮೂರ್ಛೆ ಬರುವದು. ಮನಸ್ಸು, ಇಂದ್ರಿಯ, ಪ್ರಾಣ, ದೇಹ ಎಲ್ಲವೂ ನಮಗೆ ಅಡಿಯಾಳಾಗಿ ನಮ್ಮ ಕೆಲಸಕ್ಕೆ ಅಣಿಯಾಗುವವು. ಆದ್ದರಿಂದ ಬುದ್ಧಿಯೊಡನೆ ಬೆರೆತು

ನಾನು ಕರ್ತೃವೆಂದು ತಿಳಿಯುವದನ್ನು ಬಿಟ್ಟು **ಶುದ್ಧನಾದ ಆತ್ಮನೇ ನಾನು** ಎಂದು ತಿಳಿಯಬೇಕೆಂದು ವೇದಾಂತವು ನಮಗೆ ಬೋಧಿಸುತ್ತದೆ.

------

# ೧೭. ಉದಂಕನು ಮೋಸಹೋದದ್ದು

## ಸುಷುಪ್ತಿ - ಅಜ್ಞಾನ

**ನಾಜ್ಞಾನಂ ಸ್ಯಾಮಹಂ ದೇವೋಽಜ್ಞಾನಸಾಕ್ಷೀತಿ ನಿಶ್ಚಯಾತ್ ।**
**ಸರ್ವಾನರ್ಥನಿವೃತ್ತಿಃ ಸ್ಯಾದಿತಿ ವೇದಾನ್ತಡಿಣ್ಡಿಮಃ ॥**[1]

ಪೂರ್ವದಲ್ಲಿ ಉದಂಕನೆಂಬ ಒಬ್ಬ ಋಷಿಯು ಬಹುಕಾಲ ಮಹಾವಿಷ್ಣುವನ್ನು ಕುರಿತು ತಪಸ್ಸುಮಾಡಿದನು. ಆತನ ತಪಸ್ಸಿಗೆ ಮೆಚ್ಚಿದ ವಿಷ್ಣುವು ಅವನ ಪ್ರಾರ್ಥನೆಯಂತೆ ''ಇವನಿಗೆ ಅಮೃತಕಲಶವನ್ನು ಕೊಡು'' ಎಂದು ದೇವೇಂದ್ರನಿಗೆ ಅಪ್ಪಣೆಮಾಡಿದನು.

''ಈ ಬ್ರಾಹ್ಮಣನಿಗೆ ಅನಾಯಾಸವಾಗಿ ಅಮೃತಪಾನವಾಗುವದಲ್ಲ!'' ಎಂಬ ಅಸೂಯೆಯಿಂದ ಇಂದ್ರನು ಒಂದು ಉಪಾಯವನ್ನು ಮಾಡಿದನು. ಅವನು ಮೊದಲು ಚಂಡಾಲವೇಷವನ್ನು ಧರಿಸಿ ಕೈಯಲ್ಲಿ ಅಮೃತಕಲಶವನ್ನು ಹಿಡಿದುಕೊಂಡು ಉದಂಕನಿದ್ದ ಬಳಿಗೆ ಬಂದು ದೂರದಲ್ಲಿ ಕಲಶದೊಳಕ್ಕೆ ಮೂತ್ರವಿಸರ್ಜನೆಮಾಡುವವನಂತೆ ನಟಿಸಿ, ''ಅಯ್ಯ ಬ್ರಾಹ್ಮಣ, ಇಗೊ, ಅಮೃತಕಲಶವು ! ಮಹಾವಿಷ್ಣುವಿನ ಅಪ್ಪಣೆಯಂತೆ ಇಟ್ಟಿರುತ್ತೇನೆ, ತೆಗೆದುಕೊ'' ಎಂದು ಹೇಳಿದನು.

ಇದನ್ನೆಲ್ಲ ಕಂಡು ಆ ಋಷಿಯು ಜುಗುಪ್ಸೆಯಿಂದ ''ಛೇ ! ಚಂಡಾಲ, ಮೂತ್ರವನ್ನು ಮುಟ್ಟುವದಕ್ಕೆ ನಾನೇನು ಮೂಢನೆ ? ಅಥವಾ

1. ನಾನು ಅಜ್ಞಾನವೆಂಬ ಮರವೆಯಲ್ಲ, ಮರವೆಯನ್ನು ನೋಡುತ್ತಿರುವ ದೇವನೇ ನಾನು - ಎಂಬ ನಿಶ್ಚಯದಿಂದ ಎಲ್ಲಾ ಅನರ್ಥಗಳೂ ಹೋಗಿಬಿಡುವವೆಂಬುದು ವೇದಾಂತದ ಡಂಗುರವು.

ಇದು ಅಮೃತಕಲಶವಾಗಿದ್ದರೂ ಇರಲಿ, ನಿನ್ನ ಕರಸ್ಪರ್ಶದಿಂದಲೇ ಇದು ಮೈಲಿಗೆಯಾಗಿ ಬಿಟ್ಟಿದೆ. ಎಲಾ ! ನನಗೇನೂ ಬೇಡ, ಇದನ್ನು ಕೂಡಲೆ ತಗೆದುಕೊಂಡು ಹೋಗು'' ಎಂದು ಮುಖವನ್ನು ತಿರುಗಿಸಿಕೊಂಡನಂತೆ !

ವಿಚಾರಕರಲ್ಲಿ ಅನೇಕರಿಗೆ ಶುದ್ಧವಾದ ಆತ್ಮತತ್ತ್ವವನ್ನು ತಿಳಿಯುವದಕ್ಕೆ ಈ ಬಗೆಯ ತೊಂದರೆಯಾಗಿರುವದು. ನಿಷ್ಪ್ರಪಂಚವಾದ ಆತ್ಮಸ್ವರೂಪವನ್ನು ಅವರು ಕಾಣದೆ ಇಲ್ಲ. ಪ್ರತಿದಿನವೂ ಗಾಢನಿದ್ರೆಯ ಕಾಲಕ್ಕೆ ಬ್ರಹ್ಮಸ್ವರೂಪದಲ್ಲಿಯೇ ತಾವಿದ್ದರೂ ಅದನ್ನು ಅರಿಯದಿರುವರು. **ತನಿನಿದ್ರೆಯಲ್ಲಿರುವ ಸ್ವರೂಪವೇ ನಿಷ್ಪ್ರಪಂಚವಾದ ಆತ್ಮ**ನೆಂದು ಶಾಸ್ತ್ರಗಳಲ್ಲಿ ಸಾರಿಸಾರಿ ಹೇಳಿದ್ದರೂ, ಉದಂಕನು ಅಮೃತವನ್ನು ಚಂಡಾಲಮೂತ್ರ ವೆಂದು ಶಂಕಿಸಿದಂತೆ, ನಿದ್ರೆಯಲ್ಲಿ ತಮ್ಮ ಸ್ವರೂಪಕ್ಕೆ ಅಜ್ಞಾನವೆಂಬ ಮರೆಯು ಮುಚ್ಚಿಕೊಂಡಿರುವದೆಂದು ಭಾವಿಸಿರುವರು.

ಎಚ್ಚರದಲ್ಲಿ ನಾನು, ಮತ್ತೊಬ್ಬರು - ಎಂಬ ಅರಿವು ಇರುವದಷ್ಟೆ, ಇದಕ್ಕೆ **ವಿಶೇಷಜ್ಞಾನ**ವೆಂದು ಹೆಸರು. ಈ ಜ್ಞಾನವು ನಿದ್ರೆಯಲ್ಲಿರುವದಿಲ್ಲ. ಅಷ್ಟುಮಾತ್ರದಿಂದ ನಿದ್ರೆಯು ಮರವೆಯ ಸ್ಥಿತಿಯೇ ಹೊರತು ಅರಿವಿನ ಸ್ಥಿತಿಯಲ್ಲವೆಂದು ಜನರು ನೆನಸುವರು. ನಿಜವಾಗಿ ಚಂಡಾಲನು ಉದಂಕ ನೆದುರಿಗೆ ಬರಲೇ ಇಲ್ಲ. ಇದರಂತೆ ಅಜ್ಞಾನವೆಂಬುದು ನಿದ್ರೆಯಲ್ಲಿಲ್ಲವೇ ಇಲ್ಲ. ನಿದ್ರೆಯಲ್ಲಿ ವಿಶೇಷಜ್ಞಾನವು ಇಲ್ಲದೆ ಇದ್ದರೂ ಯಾವದೂ ಇಲ್ಲ ವೆಂದು ಅರಿಯುವದಕ್ಕೆ ಬೇಕಾದ ಆತ್ಮನ ಸ್ವರೂಪಜ್ಞಾನವು ಇಲ್ಲದೆ ಇಲ್ಲ. ಇದು ಒಂದು ಸಾಧನದಿಂದ ಹುಟ್ಟುವ ಅರಿವಲ್ಲ. ಅರಿವಿನ ಸ್ವರೂಪವಾದ **ಬರಿಯರಿವು.** ಇದನ್ನೇ ಶುದ್ಧಚೈತನ್ಯವೆಂದು ಕರೆಯುತ್ತಾರೆ.

ಅರಿವು, ಮರವೆ- ಎಂಬ ವಿಶೇಷಸ್ಥಿತಿಗಳನ್ನು ನೋಡುತ್ತಿರುವ, ಎಂದೆಂದಿಗೂ ನಾಶವಾಗದ, ಈ ಬರಿಯರಿವಿನ ಜ್ಞಾನವೇ ಆತ್ಮಜ್ಞಾನವು. ಈ ಆತ್ಮಜ್ಞಾನವನ್ನು ಪಡೆದವರಿಗೆ ಎಂದಿಗೂ ಸಾವಿಲ್ಲದ ಆತ್ಮಸ್ವರೂಪವೇ ತಾವೆಂದು ಗೊತ್ತಾಗುವದು. ಇಂಥವರು ಅಮೃತಪಾನವನ್ನು ಮಾಡಿದ ದೇವತೆಗ.ಗಿಂತಲೂ ಹೆಚ್ಚೆಂದು ಭಾವಿಸಬೇಕು, ಏಕೆಂದರೆ, ದೇವತೆಗಳಿಗೆ

ಕಲ್ಪಾಂತದಲ್ಲಿಯಾದರೂ ಮರಣವುಂಟು ; ಆತ್ಮನನ್ನರಿತವರಿಗೆ ಯಾವ ಅನರ್ಥವೂ ಎಂದೆಂದಿಗೂ ಆಗುವದಕ್ಕೆಡೆಯಿಲ್ಲ.

# ೧೮. ಕುರಿಯಾಗಿದ್ದ ಹುಲಿ

## ಅಭೇದ - ಭೇದ

**ಅವಿದ್ಯೋಪಾಧಿಕೋ ಜೀವೋ ಮಾಯೋಪಾಧಿಕ ಈಶ್ವರಃ ।**
**ಮಾಯಾವಿದ್ಯಾಗುಣಾತೀತಂ ಬ್ರಹ್ಮ ವೇದಾನ್ತಡಿಣ್ಡಿಮಃ ॥**[1]

ಒಬ್ಬ ಕುರುಬನಿಗೆ ಒಂದು ಹುಲಿಯ ಮರಿಯು ಸಿಕ್ಕಲಾಗಿ ಅವನು ಅದನ್ನು ಬಲು ಅಕ್ಕರೆಯಿಂದ ಸಾಕಿದನು. ಇದು ಕುರಿಯ ಮಂದೆಯಲ್ಲಿಯೇ ಬೆಳೆಯುತ್ತ ಕೊನೆಗೆ ತಾನು ಒಂದು ಕುರಿಯೆಂದೇ ಭಾವಿಸಿಕೊಂಡಿತು. ಕುರಿಗಳಂತೆ 'ಬ್ಯಾ ! ಬ್ಯಾ !' ಎನ್ನುವದು. ಕುರುಬನು 'ಹುಸ್' ಎಂದರೆ ಕುರಿಗಳು ತಿರುಗಿದ ಕಡೆ ತಾನೂ ಕತ್ತುಬಗ್ಗಿಸಿಕೊಂಡು ತಿರುಗುವದು - ಹೀಗೆ ಇದರ ಆಚರಣೆಯೆಲ್ಲ ಕುರಿಗಳದೇ ಆಗಿಬಿಟ್ಟಿತು.

ಹೀಗಿರುವಲ್ಲಿ ಒಂದು ದಿನ ಒಂದು ಹುಲಿಯು ಕುರಿಯ ಮಂದೆಯಮೇಲೆ ಬೀಳಲಾಗಿ ಕುರಿಯ ಮರಿಗಳೆಲ್ಲ ಚೆಲ್ಲಾಪಿಲ್ಲಿಯಾದವು. ಕುರುಬನೂ ಹೆದರಿ ಎಲ್ಲಿಯೋ ಅವಿತುಕೊಂಡನು. ಆ ಹುಲಿಯ ಮರಿಯೂ ಮಿಕ್ಕ ಕುರಿಗಳಂತೆಯೇ ತಾನೂ ಓಡಿಹೋಗುವದಕ್ಕೆ ಪ್ರಾರಂಭಿಸಿತು.

ಇದನ್ನು ಕಂಡ ಹೊಸ ಹುಲಿಯು ಆಶ್ಚರ್ಯದಿಂದ ''ಎಲಾ, ಇದೇನು ! ನೀನೇಕೆ ಓಡಿಹೋಗುತ್ತಿ ? ನೀನು ನಮ್ಮವನಲ್ಲವೆ ?'' ಎಂದು

---

1. ಜೀವನಿಗೆ ಅವಿದ್ಯೆಯು ಉಪಾಧಿ, ಈಶ್ವರನಿಗೆ ಮಾಯೆಯು ಉಪಾಧಿ ; ಬ್ರಹ್ಮಕ್ಕೆ ಅವಿದ್ಯೆಯಾಗಲಿ ಮಾಯೆಯಾಗಲಿ ಯಾವದೂ ಇರುವದಿಲ್ಲವೆಂಬುದು ವೇದಾಂತದ ಡಂಗುರವು.

ಎಷ್ಟೆಷ್ಟು ಹೇಳಿದರೂ ಮರಿಯು ಕೇಳದೆಹೋಯಿತು. ನಿಜವಾಗಿ ಹುಲಿಯ ಮರಿಯು ಈಗ ಬೆಳೆದು ಪ್ರಾಪ್ತವಯಸ್ಕವಾಗಿದ್ದರೂ ತನ್ನ ಸ್ವರೂಪದ ಕಡೆಗೆ ಅದರ ಲಕ್ಷ್ಯವಿರಲಿಲ್ಲ. ಆಗ ಹೊಸ ಹುಲಿಯು ''ಏನಣ್ಣ.ಏತಕ್ಕೆ ಹೆದರುತ್ತೀಯೆ ? ನೀನೂ ಕುರಿಗಳಂತೆ ಆಡುವದನ್ನು ಕಂಡು ನನಗೆ ಆಶ್ಚರ್ಯವೂ ಖೇದವೂ ಆಗುತ್ತಿದೆ. ಚೆನ್ನಾಗಿ ನೋಡು, ನಿನಗೂ ನನಗೆ ಇರುವಂತೆ ಉಗುರುಗಳು ಇವೆ ; ನಿನ್ನ ಮೈಯೂ ನನ್ನ ಮೈಯಂತೆ ಪಟ್ಟೆಪಟ್ಟೆಗಳಾಗಿದೆ ; ನಿನಗೂ ನನ್ನಂತೆಯೇ ಮೀಸೆಗಳಿವೆ; ನಿನ್ನ ಹೆಜ್ಜೆಯೂ ನನ್ನ ಹೆಜ್ಜೆಯೂ ಒಂದೇ'' ಎಂದು ಪರಿಪರಿಯಲ್ಲಿ ಸಾಮ್ಯವನ್ನು ತೋರಿಸಿದ್ದಲ್ಲದೆ ''ಅಯ್ಯ, ಹತ್ತಿರದಲ್ಲಿಯೇ ಇರುವ ಆ ಕೊಳದಲ್ಲಿ ಬಗ್ಗಿನೋಡು, ನಿನ್ನ ಮುಖವು ನನ್ನ ಮುಖದಂತೆ ಇದೆಯೋ. ಕುರಿಗಳ ಮುಖದಂತೆ ಇದೆಯೋ ಗೊತ್ತಾಗುತ್ತದೆ. ಆಗಲಾದರೂ ನಿನಗೆ ನನ್ನ ಮಾತಿನಲ್ಲಿ ಭರವಸೆಯುಂಟಾಗುವದು'' ಎಂದು ಹೇಳಿತು.

ಕುರಿಯು ಕೊಳದಲ್ಲಿ ನೋಡಲಾಗಿ ತನ್ನ ಮುಖದ ಪ್ರತಿಬಿಂಬವು ಹುಲಿಯ ಮುಖದಂತೆಯೇ ಇದ್ದದ್ದನ್ನು ಕಂಡು ತಾನು ಹೇಗೋ ಮೋಸ ಹೋಗಿರುವೆನೆಂದು ತಿಳಿದು ಒಂದು ಸಲ ಪ್ರಯತ್ನಪಟ್ಟು ಹುಲಿಯಂತೆ ಆರ್ಭಟಿಸಿತು. ಕೂಡಲೇ ಆ ಕಡೆಗೆ ಬರುತ್ತಿದ್ದ ಕುರಿಗಳೇ ಮೊದಲಾದ ಪ್ರಾಣಿಗಳು ದಿಕ್ಕಾಪಾಲಾಗಿ ಚದರಿದವು. ತಾನೂ ಹುಲಿಯೆಂಬ ವಿಷಯಕ್ಕೆ ಇನ್ನು ಯಾವ ಸಂದೇಹವೂ ಉಳಿಯಲಿಲ್ಲವಾದ್ದರಿಂದ ತನ್ನ ಮನಬಂದಂತೆ ಬೇರೊಂದು ಕಡೆಗೆ ಹೋಗಿ ಆ ಹೊತ್ತಿನಿಂದ ಸುಖವಾಗಿ ಸ್ವಾತಂತ್ರ್ಯವನ್ನನುಭವಿಸುತ್ತಿತ್ತು.

ಹೀಗೆಯೇ ಜೀವನು ತನಗೆ ಅವಿದ್ಯೆಯಂಬ ಮರವೆಯು ಇರುವದರಿಂದ ತಾನು ಜಗಜ್ಜನ್ಮಾದಿಕಾರಣನೂ ಸರ್ವಜ್ಞನೂ ಸರ್ವಶಕ್ತನೂ ಆದ ಈಶ್ವರನ ಸಮಾನನಾಗಲಾರನೆಂದು ಕುರಿಗಳ ಮಧ್ಯದ ಹುಲಿಯಂತೆ ಇಲ್ಲದ ಭಯವನ್ನು ತಂದುಕೊಂಡಿರುವನು. ಯಾವಾಗ ಇವನಿಗೆ ಜಗತ್ತೇ ಮಿಥ್ಯೆಯೆಂದು ತಿಳಿಯುವದೋ, ಯಾವಾಗ ತನ್ನಲ್ಲಿರುವ ಅಜ್ಞಾನವೂ ನಿಜವಾಗಿರುವದಲ್ಲವೆಂದು ತಿಳಿಯುವದೋ, ಆಗ ಕುರಿಯ ಭಾವನೆಯನ್ನು

ಬಿಟ್ಟ ಹುಲಿಯಂತೆ ತನ್ನ ಸಚ್ಚಿದಾನಂದಸ್ವರೂಪವನ್ನು ಅರಿತು **ತನಗೂ ಬ್ರಹ್ಮಕ್ಕೂ ಯಾವ ಭೇದವೂ** ಇಲ್ಲವೆಂಬುದನ್ನು ಕಂಡುಕೊಳ್ಳುವನು.

ಈಶ್ವರನನ್ನೂ ಜೀವನನ್ನೂ ಬೇರ್ಪಡಿಸಿ ತೋರಿಸುವ ಸುತ್ತುಗಟ್ಟುಗಳಿಗೆ **ಉಪಾಧಿ**ಯೆಂದು ಹೆಸರು. ಈಶ್ವರನಿಗೆ ಮಾಯೆಯೇ ಉಪಾಧಿ, ಜೀವನಿಗೆ ಅವಿದ್ಯೆಯೇ ಉಪಾಧಿ. ಅವಿದ್ಯೆಯೆಂದರೆ ತಪ್ಪುತಿಳಿವಳಿಕೆ ; ಮಾಯೆಯೆಂದರೆ ಆ ಅವಿದ್ಯೆಯಿಂದ ಕಾಣುವ ಹುಸಿತೋರಿಕೆಯ ಬೀಜಶಕ್ತಿ. ಇವೆರಡೂ ನಿಜವಾಗಿಲ್ಲದ್ದರಿಂದ ಜೀವೇಶ್ವರರಿಗೆ ನಿಜವಾಗಿ ಯಾವ ಭೇದವೂ ಇಲ್ಲ.

# ೧೯. ಹತ್ತು ಜನ ಮಂಕರು

## ವಾಕ್ಯಪ್ರತ್ಯಕ್ಷ-ಇಂದ್ರಿಯಪ್ರತ್ಯಕ್ಷ

**ದಶಮಸ್ಯ ಪರಿಜ್ಞಾನೇ ನಾಯಾಸೋಽಸ್ತಿ ಯಥಾ ತಥಾ ।**
**ಸ್ವಸ್ಯ ಬ್ರಹ್ಮಾತ್ಮವಿಜ್ಞಾನ ಇತಿ ವೇದಾನ್ತಡಿಣ್ಡಿಮಃ ॥**[1]

ಒಂದೂರಿನಲ್ಲಿ ಹತ್ತು ಜನ ಮಂಕರು ಗೆಳೆಯರಾಗಿದ್ದರು. ಇವರು ಒಂದು ದಿನ ಒಂದು ನದಿಯನ್ನು ದಾಟಿ ಆಚೆಗೆ ಬಂದು ''ನಾವೆಲ್ಲರೂ ಇದೇವೆಯೊ, ಇಲ್ಲವೊ, ನೋಡಬೇಕು'' - ಎಂದು ಎಣಿಸಿಕೊಳ್ಳಲಾಗಿ ಪ್ರತಿಯೊಬ್ಬನೂ ತನ್ನನ್ನು ಬಿಟ್ಟು ಎಣಿಸಿಕೊಳ್ಳುತ್ತಿದ್ದದ್ದರಿಂದ, ಒಂಬತ್ತೇ ಜನವಾಯಿತು. ''ಅಯ್ಯೊ ! ಹತ್ತನೆಯವನು ಹೋದನಲ್ಲ, ಏನು ಗತಿ !'' ಎಂದು ಗೋಳಿಡುತ್ತ ಗಲಾಟೆಯನ್ನು ಎಬ್ಬಿಸಿದ್ದ ಆ ಜನರನ್ನು ಒಬ್ಬ ದಾರಿಹೋಕನು ಕಂಡು ''ಏನಿರಯ್ಯ, ನಿಮಗೆ ಒದಗಿರುವ ದುಃಖ ?'' ಎಂದು

---

1. ಹತ್ತನೆಯವನನ್ನು ವಾಕ್ಯದಿಂದ ತಿಳಿಯುವದಕ್ಕೆ ಹೇಗೆ ಕಷ್ಟವಿಲ್ಲವೋ' ಅದರಂತೆ ನಾನು ಬ್ರಹ್ಮಸ್ವರೂಪನೆಂದು ಶಾಸ್ತ್ರವಾಕ್ಯದಿಂದ ತಿಳಿಯುವದಕ್ಕೂ ಕಷ್ಟವಿಲ್ಲ. ಹೀಗೆಂದು ವೇದಾಂತದ ಡಂಗುರವು.

ವಿಚಾರಿಸಿದನು. ನಡೆದ ಸಂಗತಿಯನ್ನು ಅವರಿಂದ ತಿಳಿದು "ಅಯ್ಯೋ ಮುಟ್ಠಾಳ! ಇಲ್ಲಿ ನೋಡೊ, ನೀನೇ ಹತ್ತನೆಯವನು!" ಎಂದು ಒಬ್ಬನಿಗೆ ತಿಳಿಯಹೇಳಲು, ಕೂಡಲೆ ಅವರೆಲ್ಲರಿಗೂ ತಮ್ಮ ದಡ್ಡತನವು ತಿಳಿಯಿತು. "ಹೋಗಲಿ ಬಿಡಿ, ನಿಜವಾಗಿ ಯಾರೂ ಹೋಗಿಲ್ಲವಲ್ಲ !" ಎಂದು ಸಂತೋಷದಿಂದ ಮುಂದಕ್ಕೆ ಹೊರಟರು.

ಮಂಕರಿಗೆ ನೋಡುವದಕ್ಕೆ ಕಣ್ಣಿರದೆ ಇರಲಿಲ್ಲ ; ಆದರೂ ಹತ್ತನೆಯವನ ಪ್ರತ್ಯಕ್ಷವು ಆಗಲಿಲ್ಲ. 'ನೀನೇ ಹತ್ತನೆಯವನು'ಎಂಬ ವಾಕ್ಯದಿಂದಲೇ "ಹತ್ತನೆಯವನು ಇಲ್ಲಿಯೇ ಇದಾನೆ, ನಾನೇ ಅವನು" ಎಂದು ಜ್ಞಾನವಾಯಿತು. 'ಬ್ರಹ್ಮವೇ ನೀನು'ಎಂಬ ಶ್ರುತಿವಾಕ್ಯದಿಂದಲೂ ಇದರಂತೆಯೇ ಬ್ರಹ್ಮದ ಅಪರೋಕ್ಷಜ್ಞಾನವಾಗುತ್ತದೆ. ಹೊರಗಿರುವ ವಿಷಯ, ದೇಹ, ಇಂದ್ರಿಯ, ಪ್ರಾಣ - ಎಂಬ ನಾಲ್ಕು, ಒಳಗಿರುವ ಮನಸ್ಸೇ ಮುಂತಾದ ಅಂತಃಕರಣಗಳು ನಾಲ್ಕು, ಅಜ್ಞಾನವೊಂದು - ಹೀಗೆ ಒಂಬತ್ತರಲ್ಲಿ ಯಾವದೋ ಒಂದು ಆತ್ಮನಾಗಿರಬೇಕೆಂದು ನಾವು ಅಲ್ಲಿಯೇ ಹುಡುಕುತ್ತಿರುವವರೆಗೂ ನಮಗೆ ಆತ್ಮಜ್ಞಾನವಾಗುವದಿಲ್ಲ, ಆತ್ಮನು ಇದಾನೆಂದು ಒಂದು ವೇಳೆ ಅವರಿವರು ಹೇಳುವದನ್ನು ಕೇಳಿದರೂ ಆತ್ಮನು ಎಲ್ಲಿದಾನೋ ಎಂಬ ಸಂದೇಹವು ಹೋಗುವದಿಲ್ಲ. **ಹುಡುಕುವ ನೀನೇ ಆತ್ಮನು, ಈ ಆತ್ಮನೇ ಬ್ರಹ್ಮವು** ಎಂಬ ಶ್ರುತಿವಾಕ್ಯವನ್ನು ಕೇಳುತ್ತಲೇ ಬ್ರಹ್ಮಾತ್ಮನ ಅಪರೋಕ್ಷಜ್ಞಾನವುಂಟಾಗುತ್ತದೆ. ವಾಕ್ಯವನ್ನು ಕೇಳಿದಮೇಲೆ ಹತ್ತನೆಯವನನ್ನು ಅರಿಯುವದಕ್ಕೆ ಮತ್ತೆ ಯಾವ ಆಯಾಸವನ್ನು ಪಡುವದೂ ಅಗತ್ಯವಾಗದೆಹೋದಂತೆಯೇ, ಶ್ರುತಿಯ ಮಹಾವಾಕ್ಯವನ್ನು ಶ್ರವಣಮಾಡಿದಮೇಲೆ ತಾನೇ ಬ್ರಹ್ಮವೆಂದು ತಿಳಿಯುವದಕ್ಕೆ ಯಾವ ಆಯಾಸವನ್ನೂ ಪಡಬೇಕಾದದ್ದಿಲ್ಲ.

------

# ೨೦. ಹಂ ಗಾಡಿವಾಲ !

## ಕೃತಕೃತ್ಯತೆ - ಕರ್ತವ್ಯತಾಜ್ಞಾನ

**ನ ಕುರ್ಯಾನ್ನ ವಿಜಾನೀಯಾತ್ ಸರ್ವಂ ಬ್ರಹ್ಮೇತ್ಯನುಸ್ಮರನ್ ।**
**ಯಥಾ ಸುಖಂ ತಥಾ ತಿಷ್ಠೇದಿತಿ ವೇದಾನ್ತಡಿಣ್ಡಿಮಃ ॥**[1]

ಒಂದೂರಿನಲ್ಲಿ ಒಬ್ಬ ಜ್ಞಾನಿಯಿದ್ದನು. ಅವನು ಒಂದು ಮರದ ಕೆಳಗೆ ಕುಳಿತು ''ಅಹಂ ಬ್ರಹ್ಮಾಸ್ಮಿ ! ಅಹಂ ಬ್ರಹ್ಮಾಸ್ಮಿ !'' (ನಾನು ಬ್ರಹ್ಮವಾಗಿರುವೆ, ನಾನು ಬ್ರಹ್ಮವಾಗಿರುವೆ) ಎಂದು ಕೂಗುತ್ತಿದ್ದನು. ಒಂದುದಿನ ಒಬ್ಬ ಗಾಡಿಯವನು ಗಾಡಿಯನ್ನು ಹೊಡೆದುಕೊಂಡು ಆ ಮಾರ್ಗದಲ್ಲಿ ಬಂದನು. ಅವನು ಈ ಜ್ಞಾನಿಯ ಕಡೆಗೆ ತಿರುಗಿ ಮುಂದೆ ನಿಂತು 'ಹಂ ಗಾಡಿ ವಾಲ ! ಹಂ ಗಾಡಿವಾಲ !' (ನಾನು ಗಾಡಿಯವ, ನಾನು ಗಾಡಿಯವ!) ಎಂದು ಕೂಗಿಕೊಳ್ಳುವದಕ್ಕೆ ಮೊದಲುಮಾಡಿದನು. ವೇದಾಂತಿಯು ಜುಗುಪ್ಸೆಯಿಂದ 'ಛೆ ! ಏತಕ್ಕೆ ಒದರಿಕೊಳ್ಳುತ್ತೀಯೆ ? ನೀನು ಗಾಡಿಯನ್ನು ಹೊಡೆಯುವದರಿಂದಲೇ ಗಾಡಿವಾಲನೆಂದು ಗೊತ್ತಾಗುವದಿಲ್ಲವೆ ? ನೀನು ಗಾಡಿ ಹೊಡೆಯುವವನಲ್ಲದೆ ಮತ್ತೆ ಯಾರಾದೀಯೆ ?' ಎಂದು ಗದರಿಸಿಕೊಂಡನು.

ಆಗ ಗಾಡಿಯವನು ''ಹೌದು ಬುದ್ದೀ, ಹೌದು. ತಾವು ಬ್ರಹ್ಮವಲ್ಲದೆ ಮತ್ತೇನು ? ಆದರೂ ನಾನೇ ಬ್ರಹ್ಮವೆಂದು ತಾವೇಕೆ ಕೂಗುತ್ತಿದ್ದೀರಿ ?'' ಎಂದು ಕೇಳಿದನು. ಆ ತಪಸ್ವಿಯು ನಾಚಿಕೆಯಿಂದ ''ಇವನೇ ನನಗೆ ನಿಜವಾದ ಗುರುವು, ನಾನು ಬ್ರಹ್ಮವೇ ಆಗಿರುವಾಗ

1. ಎಲ್ಲವೂ ಬ್ರಹ್ಮವೇ ಎಂದು ಯಾವನ ನೆನಪಿಗೆ ಬಂತೋ ಅವನು ಮಾಡಬೇಕಾದದ್ದಿಲ್ಲ, ಅರಿಯಬೇಕಾದದ್ದಿಲ್ಲ. ಹೇಗೆ ಸುಖವಾಗುವದೋ ಹಾಗೆ ಇರಬಹುದು - ಎಂದು ವೇದಾಂತದ ಡಂಗುರವು.

'ನಾನು ಬ್ರಹ್ಮವೆಂದು ಜಪಿಸಿಕೊಳ್ಳುವದರಲ್ಲಿ ಫಲವೇನು ?'' ಎಂದು ಆತನಿಗೆ ಬಹುವಾಗಿ ವಂದನೆಯನ್ನು ಸಮರ್ಪಿಸಿದನಂತೆ !

ಬ್ರಹ್ಮವೇ ತಾನೆಂಬ ಅರಿವು ಬಂದಮೇಲೆ ಮತ್ತೇನೂ ಮಾಡಬೇಕಾದದ್ದಿಲ್ಲ. ಬ್ರಹ್ಮವು ತಾನೆಂಬ ಅರಿವು ಮರೆತುಹೋದೀತೆಂಬ ಭಯವೇನೂ ಇರುವದಿಲ್ಲವಾದ್ದರಿಂದ ಇದನ್ನೇ ಮನಸ್ಸಿನಲ್ಲಿ ಗಟ್ಟಿಮಾಡಿಕೊಳ್ಳಬೇಕಾದದ್ದೇನೂ ಇಲ್ಲ. ಈ ಜ್ಞಾನವು ಯಾರಿಗೆ ಬರುವದೋ ಅವರು ಕೃತಕೃತ್ಯರು, ಎಂದರೆ ಮಾಡಬೇಕಾದದ್ದನ್ನೆಲ್ಲ ಮಾಡಿದವರು. **ಮಿಗಿಲಿಲ್ಲದ ತೃಪ್ತಿಯೇ ಬ್ರಹ್ಮಜ್ಞಾನದ ಗುರುತಾಗಿರುವದು.** ಸೋಮಾರಿಗಳು ಏನೂ ಬೇಡವೆಂದು ತೆಪ್ಪನೆ ಕೂತಕಡೆ ಕೂತಿದ್ದರೂ, ನಿಜವಾಗಿ ಅವರ ಮನಸ್ಸಿನಲ್ಲಿ ತೃಪ್ತಿಯಿರುವದಿಲ್ಲ. ಬ್ರಹ್ಮಜ್ಞಾನಿಗಳು ಕೆಲಸಮಾಡುತ್ತಿದ್ದರೂ ಸುಮ್ಮನಿದ್ದರೂ ಯಾವಾಗಲೂ ತೃಪ್ತರಾಗಿಯೇ ಇರುತ್ತಿರುವರು. ಏಕೆಂದರೆ ಅವರು ತಮಗಾಗಿ ಮಾಡಿಕೊಳ್ಳಬೇಕಾದದ್ದು ಏನೂ ಇಲ್ಲವೆಂಬ ಪರಮಾರ್ಥವನ್ನು ಅರಿತುಕೊಂಡಿರುವರು.

# ೨೧. ಜಾನ್ಸನ್ನನು ವಾದದಲ್ಲಿ ಸೋತದ್ದು

## ಜೀವನ್ಮುಕ್ತ್ಯಾನಂದ - ಸಂಸಾರ

**ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ ।**
**ಜೀವನ್ಮುಕ್ತಸ್ತು ತದ್ವಿದ್ವಾನಿತಿ ವೇದಾನ್ತಡಿಣ್ಡಿಮಃ ॥**[1]

ಇಂಗ್ಲೆಂಡಿನಲ್ಲಿ ಜಾನ್ಸನ್ ಎಂಬ ಮಹಾವಿದ್ವಾಂಸನಿದ್ದನು. ಇವನಿಗೆ ವಿದ್ವಾಂಸರಲ್ಲೆಲ್ಲ ಬಲು ಮಾನ್ಯತೆಯಿರುತ್ತಿತ್ತು. ಈತನು ಯಾರಿಗೂ ವಾದದಲ್ಲಿ

1. ಬ್ರಹ್ಮವೇ ಸತ್ಯ, ಜಗತ್ತು ಮಿಥ್ಯೆ ; ಜೀವನು ಬ್ರಹ್ಮವೇ ; ಬೇರೆಯಲ್ಲ. ಆದನ್ನು ತಿಳಿದವನೇ ಜೀವನ್ಮುಕ್ತನು- ಎಂದು ವೇದಾಂತದ ಡಂಗುರವು.

ಸೋಲುತ್ತಿರಲಿಲ್ಲ. ಹೀಗಿರುವಲ್ಲಿ ಒಂದು ದಿನ ಕನಸಿನಲ್ಲಿ ಯಾವನೋ ಒಬ್ಬನು ಇವನೊಡನೆ ಚರ್ಚೆಗೆ ಪ್ರಾರಂಭಿಸಿ ಒಂದೊಂದು ಸಲಕ್ಕೂ ವಾದದಲ್ಲಿ ಇವನನ್ನು ಸೋಲಿಸಿ ಪೆಚ್ಚುಮಾಡಿದನು.

ಜಾನ್ಸನ್ನನಿಗೆ ತೀರ ಅಪಮಾನವಾಗಿ ಕೊನೆಗೆ ಎಚ್ಚರವಾಯಿತು. ತನಗೆ ಕನಸಿನಲ್ಲಿ ಆದ ಸ್ಥಿತಿಗೆ ತಾನೇ ಖೇದವನ್ನೂ ಆಶ್ಚರ್ಯವನ್ನೂ ಪಡುತ್ತಾ ಇದು ಹೇಗೆ ಸಂಭವಿಸಿರಬಹುದೆಂದು ಯೋಚಿಸುತ್ತಿರುವಲ್ಲಿ ಈ ವಿದ್ವಾಂಸನಿಗೆ ಒಂದು ಉತ್ತಮವಾದ ಯೋಚನೆಯು ಹೊಳೆಯಿತು. ''ಇದೆಲ್ಲವೂ ನನ್ನ ಕನಸೇ ಹೊರತು ಮತ್ತೇನೂ ಅಲ್ಲ. ನಿಜವಾಗಿ ಯಾರೂ ಕನಸಿನಲ್ಲಿ ಬರಲಿಲ್ಲ. ಯಾರೂ ನನ್ನೊಡನೆ ವಾದಮಾಡಲಿಲ್ಲ, ಸೋಲಿಸಲೂ ಇಲ್ಲ. ನನ್ನನ್ನು ಸೋಲಿಸಿದಂತೆ ಕನಸಿನಲ್ಲಿ ತೋರಿದ ವಿದ್ವಾಂಸನು ತನ್ನ ಕನಸಿನಲ್ಲಿಯೇ ಇದ್ದದ್ದರಿಂದ ಅವನಿಗೆ ತೋರಿದ ಯುಕ್ತಿಗಳೂ ನನ್ನವೇ. ಆದ್ದರಿಂದ ನಾನೇ ಎಲ್ಲರಿಗಿಂತಲೂ ಬುದ್ಧಿವಂತನೆಂಬುದು ಈ ಕನಸಿನಲ್ಲಿಯೂ ದೃಢವಾಯಿತು. ಇದಕ್ಕಾಗಿ ಯೋಚನೆ ಏತಕ್ಕೆ ?'' ಎಂದು ಕೊನೆಗೆ ತನಗೆ ತಾನೇ ಸಮಾಧಾನ ಮಾಡಿಕೊಂಡನಂತೆ !

ವೇದಾಂತಭಾವನೆಯೂ ಇದಕ್ಕೆ ಸಮನಾಗಿರುವದು. ''ಈ ಜಗತ್ತೆಲ್ಲವೂ ನನ್ನ ಕನಸು, ಇದು ಶುದ್ಧ ಸುಳ್ಳು'' ಎಂದು ಯಾವನಾದರೂ ಭಾವನೆಯನ್ನು ತಂದುಕೊಂಡಮಾತ್ರಕ್ಕೆ ಎಲ್ಲಾ ಭಯವೂ ಬಿಟ್ಟು ಓಡುತ್ತದೆ. ಇದು ಕನಸಲ್ಲವೆಂದು ಹೇಳುವದಕ್ಕೆ ಯಾವ ಪ್ರತಿವಾದಿಯೂ ಬರುವಂತಿಲ್ಲ; ಏಕೆಂದರೆ ಎಲ್ಲಾ ವಾದಿಗಳೂ ಪ್ರತಿವಾದಿಗಳೂ ಈ ಕನಸಿನೊಳಗೇ ಸಿಕ್ಕಿ ಹೋಗಿರುತ್ತಾರಾದ್ದರಿಂದ ಅವರೂ ಮಿಥ್ಯಾರೂಪರೇ ಆಗುವರು. ಈಶ್ವರನು ಸತ್ಯರೂಪನಾದ್ದರಿಂದ ಕನಸಾದ ಜಗತ್ತಿನ ಪಕ್ಷಕ್ಕೆ ಸೇರದೆ ಅದನ್ನು ನೋಡುತ್ತಿರುವ ಸಾಕ್ಷಿಯಲ್ಲಿ ಅಡಕನಾಗುತ್ತಾನೆ. ಒಂದು ದೇಹದಲ್ಲಿ 'ನಾನು' ಎಂದು ಇಬ್ಬರು ಇರಲಾರರು, ಏಕೆಂದರೆ 'ನಾನು' ಎಂಬುದು

ನಿರಂಶವಾದ ಅರಿವಾಗಿರುವದು. ಹೀಗೆ ಜೀವ-ಬ್ರಹ್ಮೈಕ್ಯವೂ ಸಿದ್ಧವಾಗುವದು.

ಹೀಗೆ ಕನಸಿನ ರೂಪವಾದ ಜಗತ್ತನ್ನು ನೋಡುತ್ತಿರುವ ಆತ್ಮನು ನೋಡಿದರೂ ನೋಡುವದಿಲ್ಲ ; ಕೇಳಿದರೂ ಕೇಳುವದಿಲ್ಲ ; ಮುಟ್ಟಿದರೂ ಮುಟ್ಟುವದಿಲ್ಲ ; ಸವಿದರೂ ಸವಿಯುವದಿಲ್ಲ ; ಮೂಸಿದರೂ ಮೂಸುವದಿಲ್ಲ ; ಏಕೆಂದರೆ ನೋಟ, ಕೇಳುವಿಕೆ, ಮುಟ್ಟುವಿಕೆ, ಸವಿಯುವಿಕೆ, ಮೂಸುವಿಕೆ - ಇವೂ ಕನಸಿನಲ್ಲಿಯೇ ಸೇರಿರುವವು. ಹೀಗೆ ತನಗಿಂತ ಎರಡನೆಯದೇ ಇಲ್ಲವಾದ್ದರಿಂದ ಇದನ್ನರಿತಾತನಿಗೆ ಯಾವ ಬಂಧವೂ ಇರುವದಿಲ್ಲ. ಹೀಗೆ ತಾನು ಯಾವಾಗಲೂ ಮುಕ್ತನಾಗಿರುವೆನೆಂದು ಅದ್ವೈತಭಾವನೆಯಿಂದ ಅರಿತಿರುವದರಿಂದಾಗುವ ಆನಂದಕ್ಕೆ **ಜೀವನ್ಮುಕ್ತಿಯ ಆನಂದ**ವೆಂದು ಹೆಸರು.

# ೨೨. ಮನ್ಸೂರ್ ಎಂಬ ಜ್ಞಾನಿಯು

## ಮಹಾವಾಕ್ಯ - ಸಂಸಾರಭಯ

**ಅಹೋಽಸ್ಮಾಕಮಲಂ ಮೋಹೈರಾತ್ಮಾ ಬ್ರಹ್ಮೇತಿ ನಿರ್ಭಯಮ್ ।**
**ಶ್ರುತಿಭೇರೀರವೋಽದ್ಯಾಪಿ ಶ್ರೂಯತೇ ಶ್ರುತಿರಞ್ಜನಃ ॥**[1]

ಪೂರ್ವಕ್ಕೆ ಅರೇಬಿಯದಲ್ಲಿ ಮನ್ಸೂರ್ ಎಂಬ ಮಹಾತ್ಮನೊಬ್ಬನು ಆಗಿಹೋದನು. ಮಹಮ್ಮದೀಯರಲ್ಲಿ ದೇವರೊಬ್ಬನೇ ಇರುವನೆಂದೂ ನಾವೆಲ್ಲರೂ ಆತನ ಆರಾಧಕರೆಂದೂ ನಂಬಿಕೆಯಷ್ಟೆ. ಈತನು ಮಾತ್ರ

1. ಇನ್ನು ಸಾಕು. ಇಲ್ಲದ ಭ್ರಾಂತಿಯನ್ನು ಪಡಕೆಲಸವಿಲ್ಲ. ಏಕೆಂದರೆ ನಮ್ಮಗಳ ಆತ್ಮನೇ ನಿರ್ಭಯವಾದ ಬ್ರಹ್ಮವೆಂದು ಹೊಡೆಯುತ್ತಿರುವ ಶ್ರುತಿಯೆಂಬ ನಗಾರಿಯ ಸದ್ದು ಕಿವಿಗಿಂಪಾಗಿ ಇನ್ನೂ ಕೇಳಿಸುತ್ತಲೇ ಇರುವದು.

'ನಾನೇ ದೇವರು' ಎಂದು ನಂಬಿಕೊಂಡಿದ್ದದ್ದಲ್ಲದೆ ಇತರರಿಗೂ ಈ ಸಿದ್ಧಾಂತವನ್ನು ಬೋಧಿಸಬೇಕೆಂದು ''ಅನಲ್ ಹಕ್ ! ಅನಲ್ ಹಕ್ ! (ನಾನೇ ದೇವರು, ನಾನೇ ದೇವರು)'' ಎಂದು ಎಲ್ಲೆಲ್ಲಿಯೂ ಘೋಷಮಾಡುತ್ತಿದ್ದನು.

ಇದು ಆ ಕಾಲದ ಮುಸಲ್ಮಾನರಿಗೆ ಸರಿಬೀಳದೆ ರಾಜನಲ್ಲಿ ದೂರನ್ನು ಹೇಳಿಕೊಳ್ಳಲಾಗಿ ಆತನನ್ನು ಗಲ್ಲಿಗೆ ಹಾಕುವಂತೆ ರಾಜಾಜ್ಞೆಯಾಯಿತು. ಆಗ ಅವನ ರೋಮರೋಮಗಳೂ ''ಅನಲ್ ಹಕ್ ! ಅನಲ್ ಹಕ್ !''ಎಂದು ಹೇಳುವದಕ್ಕೆ ಪ್ರಾರಂಭಿಸಿದವು. ಆಗ ಆ ಜನರು ಗಾಬರಿಯಿಂದ ಅವನನ್ನು ಸುಟ್ಟು ಬೂದಿಯನ್ನು ಸಮುದ್ರಕ್ಕೆ ಎರಚಿದರು. ಆಮೇಲೆ ಸಮುದ್ರದಲ್ಲೆಲ್ಲ ''ಅನಲ್ ಹಕ್ ! ಅನಲ್ ಹಕ್ !''ಎಂದು ಧ್ವನಿಯೆದ್ದಿತು. ಸಮುದ್ರದ ಅಲೆಗಳು ಕೂಡ ಅದೇ ಶಬ್ದವನ್ನು ಉಚ್ಚರಿಸುವದಕ್ಕೆ ಪ್ರಾರಂಭಿಸಿದವು ಆಗ ಅದನ್ನು ನಿಲ್ಲಿಸುವದು ಹೇಗೆ ?

ಈಚೆಗೆ ಈತನು ಮಹಾತ್ಮನೆಂದು ಗೊತ್ತಾಗಿ ಅನೇಕರು ಇವನನ್ನು ಕೊಂಡಾಡುತ್ತಿದ್ದಾರೆ.

'ಅಹಂ ಬ್ರಹ್ಮಾಸ್ಮಿ !'ಎಂಬ ವೇದಾಂತಮಹಾವಾಕ್ಯವು ಒಂದು ನಗಾರಿಯ ಶಬ್ದದಂತೆ. ಇದು ಜಾತಿ, ನೀತಿ, ಕುಲ, ಗೋತ್ರ, ರೂಪ, ಧನ, ದೇಶ, ವೇಷ- ಮುಂತಾದ ಯಾವ ಉಪಾಧಿಯನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ **ಬ್ರಹ್ಮನನ್ನು ಮೊದಲುಗೊಂಡು ಅತ್ಯಂತ ಕೀಳುಪ್ರಾಣಿಯವರೆಗೂ ಎಲ್ಲರಲ್ಲಿಯೂ ಆತ್ಮನು ಒಬ್ಬನೇ** ಆಗಿರುವನೆಂದು ಬೋಧಿಸುತ್ತಿರುವದು. ಶ್ರುತಿಯು ಕಿವಿಗೆ ಬೀಳದೆ ಇರುವ ದೇಶಗಳಿಗೂ ಹೇಗೋ ಈ ವಾಕ್ಯದರ್ಥವು ಸಾಗಿ, ಜನರೆಲ್ಲರೂ ವಿರುದ್ಧರಾದರೂ ಹೆದರದೆ ನಾಲ್ಕು ಬೀದಿಗಳು ಸೇರಿದ ಚೌಕದಲ್ಲಿ ಎರಡೂ ಕೈಗಳನ್ನೂ ಎತ್ತಿ 'ನಾನೇ ಬ್ರಹ್ಮ !' ಎಂದು ಸಾರಿ ಸಾರಿ ಹೇಳುವಂಥ ಮಹಾತ್ಮರನ್ನು ತೋರಿಸಿಕೊಟ್ಟಿರುವದು.

ಹೀಗಿರುವಲ್ಲಿ ವೇದಗಳಿಗೆ ತೌರುಮನೆಯಾಗಿ ಮತವೈರಕ್ಕೆ ಅವಕಾಶವನ್ನೇ ಕೊಡದಂಥ ಈ ಭರತಖಂಡದಲ್ಲಿ ಯಾವನಾದರೂ ಈ ಭೇರಿಯ ನಾದಕ್ಕೆ ಕಿವಿಗೊಟ್ಟನೆಂದರೆ ಎಲ್ಲಾ ಅಜ್ಞಾನನಿದ್ರೆಯೂ ಹೋಗಿ ಸಂಸಾರಭಯರೂಪವಾಗಿರುವ ದುಸ್ಸ್ವಪ್ನವೂ ತೊಲಗಿ ಪೂರ್ಣ ಪ್ರಬೋಧವನ್ನು ಹೊಂದಿ ಧನ್ಯನಾಗುವನೆಂದು ಹೇಳುವದೇನಿದೆ ? ಆದ್ದರಿಂದ ನಾವು ನಮ್ಮ ಕೈಯಲ್ಲಾದ ಮಟ್ಟಿಗೆ ಪ್ರಯತ್ನಮಾಡಿ ತಂದು ಕೊಳ್ಳಬೇಕಾದ ಉತ್ತಮಭಾವನೆ ಯಾವದೆಂದರೆ ;

**ಶಿವೋಽಹಮ್ !**

ನಾನು ಮಂಗಲಸ್ವರೂಪವಾದ ಬ್ರಹ್ಮವು !

## ವಿನೋದ ಕಾಲಕ್ಷೇಪವನ್ನೂ ತತ್ತ್ವವಿಚಾರವನ್ನೂ ಏಕಕಾಲದಲ್ಲಿ ಒದಗಿಸುವ ಕಥೆಗಳು.

೧. **ವಿಲಕ್ಷಣಮೌನಿ :** ಅರುಣಗಿರಿ (ಕೆ. ಕೃಷ್ಣಸ್ವಾಮಿ ಅಯ್ಯರ್) ಯವರು ಬರೆದಿರುವ ಸಂಭಾಷಣಾರೂಪವಾದ ಕಥೆಯಿದು. ಇದರಲ್ಲಿ ಭೋಜರಾಜನಿಗೆ ಒಬ್ಬ ಮುನಿವರ್ಯರು ಸೂತ್ರರೂಪವಾಗಿ ಉಪದೇಶಿಸಿದ ದಶೋಪನಿಷತ್ತುಗಳ ಮಹಾತಾತ್ಪರ್ಯವನ್ನು ವಿವರಿಸಿದೆ. ಉಪನಿಷತ್ತುಗಳೆಲ್ಲವೂ ಬ್ರಹ್ಮಾತ್ಮೈಕತ್ವಪರವೆಂಬುದನ್ನು ಮನಗಾಣಿಸುವ ಗ್ರಂಥವಿದು.

**ನಾಲ್ಕನೆಯ ಮುದ್ರಣ : 1995, ಪುಟಗಳು ಕ್ರೌ. 24**

೨. **ಸಮುದ್ರ ಮಥನ :** ದೇವತೆಗಳೂ ರಾಕ್ಷಸರೂ ಕೂಡಿ ಕ್ಷೀರಸಮುದ್ರವನ್ನು ಮಥನಮಾಡಿ ಅಮೃತವನ್ನು ಪಡೆದುಕೊಂಡ ಪೌರಾಣಿಕ ಕಥೆಯಿದು. ಸಮಯಕ್ಕೆ ತಕ್ಕಂತೆ ನೀತಿಯನ್ನೂ ಆಧ್ಯಾತ್ಮ ಶಾಸ್ತ್ರದ ಗುಟ್ಟನ್ನೂ ವಿವರಿಸುತ್ತದೆ.

**ಮೂರನೆಯ ಮುದ್ರಣ : 1986, ಪು. ಕ್ರೌ. 76**

೩. **ಉಪನಿಷತ್ತುಗಳ ಮೊದಲನೆಯ ಪರಿಚಯ :** ಅಧ್ಯಾತ್ಮ ವಿದ್ಯೆಯ ಬೊಕ್ಕಸವಾಗಿರುವ ಉಪನಿಷತ್ತುಗಳಲ್ಲಿರುವ ವಿಚಾರಕ್ರಮವನ್ನು ಭಾಷ್ಯ ಸಂಪ್ರದಾಯಾನುಸಾರವಾಗಿ ವಿಚಾರಮಾಡಬೇಕೆಂಬ ಜಿಜ್ಞಾಸುಗಳಿಗೆ ಉತ್ತಮವಾದ ಪುಸ್ತಕವಿದು. ಉಪನಿಷತ್ತುಗಳಲ್ಲಿರುವ ಕಥಾಸಂದರ್ಭಗಳಲ್ಲಿ, ದೃಷ್ಟಾಂತಗಳು, ಸಿದ್ಧಾಂತ, ಸಾಧನ - ಇಷ್ಟು ವಿಷಯಗಳನ್ನು ಲಲಿತವಾದ ಶೈಲಿಯಲ್ಲಿ ನಿರೂಪಿಸಿದೆ.

**ಮೂರನೆಯ ಮುದ್ರಣ : 1995, ಪು. ಕ್ರೌ. 60**

೪. **ರಸನಿಮಿಷಗಳು :** ಮಾನವ ಜೀವನವು ಆನಂದಮಯವಾಗಿರುವುದಕ್ಕೆ ಅನುಸಂಧಾನ ಮಾಡಬೇಕಾಗಿರುವ ತತ್ತ್ವಗಳನ್ನು ಉದಾಹರಣೆಗಳ ಮೂಲಕ ಮನೋಹರವಾಗಿ ವರ್ಣಿಸಿದೆ. ಇವುಗಳನ್ನು ಓದುವಾಗ ವಾಚಕರಿಗೆ ಒಂದೊಂದು ನಿಮಿಷವೂ ರಸಮಯವಾಗಿರುವದೆಂಬದರಲ್ಲಿ ಸಂದೇಹವಿಲ್ಲ. ಶ್ರೀಶ್ರೀಗಳವರು **ಆಧ್ಯಾತ್ಮ ಚಿಂತನೆ** ಎಂಬ ಹೆಸರಿನಿಂದ ಹುಬ್ಬಳ್ಳಿಯ **ಕರ್ಮವೀರ** ಮಾಸಪತ್ರಿಕೆಗೆ ಬರೆದಿದ್ದ ಇಪ್ಪತ್ತಾರು ಸಣ್ಣ ಆಧ್ಯಾತ್ಮ ಲೇಖನಗಳ ಸಂಗ್ರಹವಿದು.

**ನಾಲ್ಕನೆಯ ಮುದ್ರಣ : 1998, ಪು. ಕ್ರೌ. 52**

೫. **ವೇದಾಂತ ಕಥಾವಳಿ :** ಇದರಲ್ಲಿ ಇಪ್ಪತ್ತೊಂದು ಪುಟ್ಟ ಕಥೆಗಳಿವೆ. ಒಂದೊಂದು ಕಥೆಯ ಕೊನೆಯಲ್ಲಿ ಅದರಿಂದ ತಿಳಿದುಕೊಳ್ಳಬೇಕಾದ ತತ್ತ್ವವನ್ನು ಬಹುಸರಳವಾದ ಭಾಷೆಯಲ್ಲಿ ವಿವರಿಸಿದೆ. ವೇದಾಂತ ವಿಷಯದ ಎಷ್ಟೋ ತಪ್ಪು ತಿಳಿವಳಿಕೆಗಳನ್ನು ಇದನ್ನು ಓದುವದರಿಂದ ಮಾಯವಾಗುವವು. ಮೊದಲನೆಯ ಸಲಕ್ಕೆ ವೇದಾಂತವನ್ನು ಓದುವವರಿಗೆ ತಕ್ಕದ್ದಾಗಿದೆ. ಈಗ ಇದು **ನಿಮ್ಮ ಕೈಯಲ್ಲಿದೆ.**

**ಆರನೆಯ ಮುದ್ರಣ : 2001, ಪು. ಕ್ರೌ. 56.**